ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ದಿಯ ಧ್ವನಿ

Volume: 04 ಸಂಪುಟ: 04 | Issue:312 ಸಂಚಿಕೆ: 312 | Date: 31-12-2025 Wednesday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

## ತುಮಕೂರಿನಲ್ಲಿ ಶೌಚಾಲಯ ಬದಿಗೆ ಬಿದ್ದ : ಬಿ.ಆರ್.ಅಂಬೇಡ್ಕರ್ ಹಾಗೂ ಡಾ. ಜಗಜೀವನ ರಾಮ್ ಪೋಟೋ

ತುಮಕೂರು: ದೇಶ ಸೇರಿದಂತೆ ಇಡೀ ಪ್ರಪಂಚಕ್ಕೆ ಸವಿಂದಾನ ತಂದುಕೊಟ್ಟ ಈ ನಾಡಿನ ಎಲ್ಲಾ ಜನರ ಆಶಾಕಿರಣ ವಿಶ್ವಜ್ಞಾನಿ ಡಾ.ಬಿ.ಆರ್ ಅಂಬೇಡ್ಕರ್ ಅವರು ಮತ್ತು ದೇಶದಲ್ಲಿ ಹಸಿರು ಕ್ರಾಂತಿ, ಹುಟ್ಟು ಹಾಕಿದ ಅನ್ನದಾತ ಡಾ ಬಾಬು ಜಗಜೀವನ್ ರಾಮ್ ಎಂದರೆ ನಾಡಿನ ಜನತೆಗೆ ಎಲ್ಲಿಲ್ಲದ ಪ್ರೀತಿ ಆದರೆ ಇಂತಹ ಮಹಾನ್ ನಾಯಕರಿಗೆ ಅವಮಾನ ಮಾಡುವಂತಹ ಅಗೌರವ ತರುವಂತಹ ಘಟನೆ ತುಮಕೂರಿನ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ನಡೆದಿದೆ.



ಗೃಹ ಸಚಿವರ ತವರು ಜಿಲ್ಲೆಯಲ್ಲಿ ಮಹಾ ನಾಯಕರಿಗೆ ಗೌರವ ಇಲ್ಲದಂತಾಗಿದ್ದು ಯಾರೋ ಕಿಡಿಗೇಡಿಗಳು ಶೌಚಾಲಯದ ಮೂಲೆಯಲ್ಲಿ ಮಹಾನ್ ನಾಯಕರ ಫೋಟೋಗಳನ್ನು ತಂದು ಎಸೆದು ಅವಮಾನ ಮಾಡಿದ್ದಾರೆ.

ಈ ಘಟನೆಯನ್ನು ಖಂಡಿಸಿ, ದಲಿತ ಜನಾಂದೋಲನ ಸಮಿತಿಯ ಪದಾಧಿಕಾರಿಗಳು ಈ ಕೃತ್ಯ ಗೈದಿರುವ ಕಿಡಿಗೇಡಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.



## ನೈತಿಕ, ಧಾರ್ಮಿಕ ಶಿಕ್ಷಣ ಮಕ್ಕಳ ಬುನಾದಿ ಸ್ವಾಸ್ಥ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗಬೇಕಿದೆ



ಶಿರಾ : ಸಮಾಜದಲ್ಲಿ ಎಲ್ಲರನ್ನು ಸಮಾನರಾಗಿ ಕಾಣುವಂತ ಗೌರವಿಸುವಂತಹ ಶಿಕ್ಷಣವನ್ನು ಬೋಧಿಸಿ ಕಲಿಸುವ ಕಾಲ ನಮ್ಮ ವ್ಯಾಸಂಗದ ಸಮಯದಲ್ಲಿತ್ತು

ಪಠ್ಯದಲ್ಲಿ ನೀತಿ ಕಥೆಗಳು ಅಳವಡಿಕೆಯಾಗಿತ್ತು ಇಂತಹ ಪಠ್ಯ ಕ್ರಮಗಳನ್ನು ಈಗಿನ ಕಾಲದಲ್ಲಿ ಹೆಚ್ಚಿನದಾಗಿ ಇನ್ನು ಕೂಡ ಅವಳವಡಿಸಿ ಮಕ್ಕಳಿಗೆ ಭೋದಿಸುವಂತಹ ಕೆಲಸವನ್ನು ಶಿಕ್ಷಣ ಸಂಸ್ಥೆಗಳು ಮಾಡಬೇಕಿದೆ ಎಂದು ಸ್ಪಟಿಕಪುರಿ ಶ್ರೀಗುರುಗುಂಡ ಬ್ರಹ್ಮೇಶ್ವರ ಮಠದ ಪೀಠಾಧ್ಯಕ್ಷರಾದ ಶ್ರೀನಂಜಾವಧೂತ ಸ್ವಾಮೀಜಿ ಹೇಳಿದರು.

ತಾಲೂಕ್ಕಿನ ಹುಲಿಕುಂಟೆ ಹೋಬಳಿಯ ಲಕ್ಕನಹಳ್ಳಿ ಗ್ರಾಮದ ಅರುಣೋದಯ ವಿದ್ಯಾ ಸಂಸ್ಥೆಯಲ್ಲಿ ಆಯೋಜಿಸಿದ್ದ ಅರುಣೋದಯ ಉತ್ಸವ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದರು. ನೀತಿ ಪಾಠ,ಪಂಚತಂತ್ರದ ಕಥೆಗಳನ್ನು ಜೀವನದ ಮೌಲ್ಯಗಳನ್ನು ಹೆಚ್ಚಿಸುತ್ತಿದ್ದು, ಮಕ್ಕಳನ್ನು ಮನುಷ್ಯರನ್ನಾಗಿಸಲು ಗುಣಮಟ್ಟದ ಶಿಕ್ಷಣದ ಜೊತೆಗೆ ಗುರು ಹಿರಿಯರನ್ನು ಗೌರವಿಸುವಂತಹ ಸಂಸ್ಕಾರಯುತ ಶಿಕ್ಷಣ ನೀಡಬೇಕಿದೆ, ಮಕ್ಕಳನ್ನು ಉತ್ತಮ ಮನುಷ್ಯರನ್ನಾಗಿಸಿ, ಶಿಕ್ಷಣವಂತರನ್ನಾಗಿಸಿ ಉದ್ಯಮಿಯಾಗಿ, ಕವಿಯಾಗಿ, ಆದರ್ಶ ಮನುಷ್ಯರನ್ನಾಗಿಸಿ ಮಾನವಿ ಮೌಲ್ಯಗಳನ್ನು ತುಂಬುತ್ತ, ಜೀವನದಲ್ಲಿ ಕರುಣೆ ಪ್ರೀತಿ ಗೌರವ ತೋರಿಸುವಂತಹ ತಂದೆ ತಾಯಿಗಳನ್ನು ದೇವಸ್ಥಾನದಲ್ಲಿ ಇಟ್ಟು ಪೂಜಿ ಸುವಂತಹ ದೇಶದ ಹಿರಿಮೆ ಪವಾಡಗಳನ್ನು ಬಿಂಬಿಸುವಂತಹ ಪ್ರಜೆಗಳನ್ನಾಗಿ ರೂಪಿಸುವಂತಹ ಶಿಕ್ಷಣದ ಜವಾಬ್ದಾರಿಯನ್ನು ಸಂಸ್ಥೆಗಳು ಹೊರಬೇಕಿದೆ ಎಂದರು.

ಸರ್ಕಾರಗಳು ರಾಜ್ಯದ ಗಡಿ ಭಾಗದ ರಸ್ತೆಗಳನ್ನು ಗಡಿಭಾಗದ ಗ್ರಾಮಗಳ ನೆಲ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊದಗಿಸಿ ತಾಲೂಕುಗಳನ್ನು ಸರ್ವಾಂಗಣವಾಗಿ ಜವಾಬ್ದಾರಿ ಹೊತ್ತು ಅಭಿವೃದ್ಧಿ ಪಡಿಸಿದಾಗ ಮಾತ್ರ ಹಳ್ಳಿಗಳ ಅಭಿವೃದ್ಧಿ ಸಾಧ್ಯ ಎಂದರು.

ಅರುಣೋದಯ ವಿದ್ಯಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಲಕ್ಕನಹಳ್ಳಿ ಮಂಜುನಾಥ್ ಗಡಿಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕೆಂಬ ಸಂಕಲ್ಪದೊಂದಿಗೆ ಶಿಕ್ಷಣ ಸಂಸ್ಥೆ ಸ್ಥಾಪನೆ ಮಾಡಿದ್ದು, ಪೋಷಕರ ಸಹಕಾರ ಶಿಕ್ಷಕರ ಗುಣಮಟ್ಟದ ಬೋಧನೆ ಸಂಸ್ಥೆ ಯಶಸ್ವಿಯಾಗಲು ಸಾಧ್ಯವಾಯಿತು ಎಂದರು.

ಧರ್ಮಪುರ ಪಂಚಲಿಂಗೇಶ್ವರ ಕಾಲೇಜ್ ಪ್ರಾಂಶುಪಾಲ ಡಾ. ವಿ ವೀರಣ್ಣ ಮಾತನಾಡಿ ಮಕ್ಕಳಲ್ಲಿ ಸಂಸ್ಕಾರ, ಸಂಸ್ಕೃತಿಕ, ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಹೆಚ್ಚು ಕಲ್ಪಿಸುವ ನಿಟ್ಟಿನಲ್ಲಿ ಜೀವನ ಸಾರ್ಥಕತೆ ಕಾಣಲು ಸಾಧ್ಯ ಎಂದರು.

ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಉತ್ಸವ ನೋಡುಗರ ಕಣ್ಮನ ಸೆಳೆಯಿತು.

ಮುಖಂಡರಾದ ತಡಕಲೂರು ಕಿರಣ್ ಗೌಡ, ವೀರಣ್ಣ, ಪ್ರಕಾಶ್, ರವಿಕುಮಾರ್, ಹನುಮಂತ ರಾಯಪ್ಪ, ಗೋವಿಂದರಾಜು,

ಮುಖ್ಯ ಕಾರ್ಯನಿರ್ವಣಧಿಕಾರಿ ಎಂ.ಲಕ್ಷ್ಮಿ ನಂದಕುಮಾರ, , ಶಾಲಾ ಮುಖ್ಯ ಶಿಕ್ಷಕ ಚಂದ್ರಣ್ಣ ಶಿಕ್ಷಕರಾದ ಅಂತೋನಿ ರಾಜ್, ವಿಜಯಲಕ್ಷ್ಮಿ, ಭಾರತಿ, ಅಂಬಿಕಾ, ಕೀರ್ತಿ ಕುಮಾರ್, ನಜೀಮಾ, ಕಣಮಪ್ಪ, ಮಹಾಲಕ್ಷ್ಮಿ, ಗುಣವತಿ, ಹೇಮರಾಜ್ ಇದ್ದರು.

## ಶಾಸಕ ಟಿ.ಬಿ.ಜಯಚಂದ್ರ ರವರಿಗೆ ಸಚಿವ ಸ್ಥಾನ ನೀಡುವಂತೆ ಆಗ್ರಹಿಸಿ ಬೃಹತ್ ಪಂಜಿನ ಮೆರವಣಿಗೆ

ಶಿರಾ : ನಗರದ ಅಂಬೇಡ್ಕರ್ ವೃತ್ತದಿಂದ ಪ್ರಾರಂಭಗೊಂಡ ಪಂಜಿನ ಮೆರವಣಿಗೆಯಲ್ಲಿ ಸಹಸ್ರಾರು ಟಿಬಿಜೆ ಅಭಿಮಾನಿಗಳು ಭಾಗವಹಿಸಿ ನೆಚ್ಚಿನ ಶಾಸಕನ ಪರ ಜೈಘೋಷಗಳನ್ನು ಕೂಗುತ್ತಾ ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ರಾಜ್ಯದಲ್ಲೇ ಅತ್ಯುತ್ತಮ ಶಾಸಕ ಎಂಬ ಪ್ರಶಸ್ತಿಗೆ ಭಾಜನರಾದ ಹಿರಿಯ ಶಾಸಕ ಟಿ.ಬಿ. ಜಯಚಂದ್ರರವರಿಗೆ ಸಚಿವ ಸ್ಥಾನ ನೀಡಲೇಬೇಕು ಎಂದು ಆಗ್ರಹಿಸಿದರು. ಈ ಪಂಜಿನ ಮೆರವಣಿಗೆಯಲ್ಲಿ ಪಾಲ್ಗೊಂಡು ಮಾತನಾಡಿದ ಪ್ರಮುಖ ಮುಂಖಂಡರು: ಕಳೆದ 5 ದಶಕಗಳಿಂದ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠಾವಂತ ಕಾರ್ಯಕರ್ತರಾಗಿ ಪ್ರಾಮಾಣಿಕ ಸೇವೆ ಮಾಡುತ್ತಿರುವ ರಾಜಕೀಯ ಮುತ್ಸದಿ, ಅಭಿವೃದ್ಧಿ ಹರಿಕಾರ, ಬರದ ನಾಡಿನ ಭಗೀರಥ ನೀರಾವರಿ ತಜ್ಞ ಶಿರಾ ಕ್ಷೇತ್ರದ ಶಾಸಕ ಟಿ.ಬಿ.ಜಯಚಂದ್ರ ರವರಿಗೆ ಮೊದಲನೇ ಸಚಿವ ಸಂಪುಟ ವಿಸ್ತರಣೆಯಲ್ಲಿಯೇ ಸಚಿವ ಸ್ಥಾನ ನೀಡಿ ಗೌರವಿಸಬಹುದಿತ್ತು, ಆದರೆ ಅದು ಕೈಗೂಡಲಿಲ್ಲ, ಈ ಭಾರೀಯ ಎರಡೇ ಅವಧಿಯ ಸಚಿವ ಸಂಪುಟ ಪುನರ್ ರಚನೆಯಲ್ಲಿ ಸಚಿವ ಸ್ಥಾನ ನೀಡಲೇಬೇಕೆಂದು ಒತ್ತಾಯಿಸಿ ಮಂಗಳವಾರ ಸಂಜೆ ಶಿರಾ ನಗರದಲ್ಲಿ ತಾಲ್ಲೂಕಿನ ಸಹಸ್ರಾರು ಟಿಬಿಜೆ ಅಭಿಮಾನಿಗಳು ಬೃಹತ್ ಪಂಜಿನ ಮೆರವಣಿಗೆ ನಡೆಸುವ ಮೂಲಕ ಸರ್ಕಾರದ ಗಮನ ಸೆಳೆದರು.

ಈ ಹಿಂದೆ ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಹಲವು ಭಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದು, ಅಭಿವೃದ್ಧಿ ವಿಚಾರವಾಗಿ ಸಾಕಷ್ಟು ಅನುಭವಿರುವ ಹಿರಿಯ ಶಾಸಕ ಟಿ.ಬಿ.ಜಯಚಂದ್ರ ರವರಿಗೆ ಈ ಭಾರಿಯ ಸಚಿವ ಸಂಪುಟ ಪುನರ್ ರಚನೆಯಲ್ಲಿ ಸಚಿವ ಸ್ಥಾನ ನೀಡಿ ಇವರ



ಅಪಾರವಾದ ರಾಜಕೀಯ ಅನುಭವವನ್ನು ರಾಜ್ಯದ ಅಭಿವೃದ್ಧಿಗೆ ಬಳಸಿಕೊಳ್ಳುವುದರ ಜೊತೆಗೆ ಸರ್ಕಾರದ ಸುಲಲಿತ ಆಡಳಿತಕ್ಕೆ ಜಯಚಂದ್ರ ರವರ ಸಂಪುಟ ಸೇರ್ಪಡೆ ಅಗತ್ಯವಾಗಿದ್ದು ಈ ನಿಟ್ಟಿನಲ್ಲಿ ಕಾಂಗ್ರೆಸ್ ಹೈ ಕಮಾಂಡ್ ಹಾಗೂ ಸರ್ಕಾರದ ಗಮನ ಸೆಳೆಯುವ ಉದ್ದೇಶದಿಂದ ಈ ಬೃಹತ್ ಪಂಜಿನ ಮೆರವಣಿಗೆ ನಡೆಸಿದ್ದೇವೆ ಎಂದು ತಿಳಿಸಿದರು.

ಶಿರಾ ಕ್ಷೇತ್ರದ ಅಭಿವೃದ್ಧಿಗೆ ವಿವಿಧ ಇಲಾಖೆ ಗಳಿಂದ ಬಹು ಕೋಟಿ ರೂಪಾಯಿ ಅನುದಾನ ತುರುವಲ್ಲಿ ಜಯಚಂದ್ರ ಅವರು ಯಶಸ್ವಿಯಾಗಿದ್ದಾರೆ. ನಗರದ ಬೆಳೆವಣಿಗೆ ಪೂರಕ ವಾತಾವರಣ ಕಲ್ಪಿಸಿ, ಬೃಹತ್ ಕೈಗಾರಿಕೆಗಳನ್ನು ಸ್ಥಾಪನೆಯಾಗುವಲ್ಲಿ ಸಾಕಷ್ಟು ಶ್ರಮಿಸುವುದರ ಜೊತೆಗೆ ಸ್ಥಳೀಯ ಯುವಕ ಯುವತಿಯರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಟ್ಟಿದ್ದಾರೆ, ಸತತ 7–8 ತಿಂಗಳುಗಳಿಂದ ವರುಣರಾಯ ಕೈಕೊಟ್ಟರು ಶಾಸಕರು ಮಾತ್ರ ಹೇಮಾವತಿ ನೀರು ಹರಿಸಿ ತಾಲ್ಲೂಕಿನ ಬಹುತೇಕ ಕೆರೆಗಳು, ಬ್ರಿಡ್ಜ್ ಕಮ್ ಚೆಕ್ ಡ್ಯಾಗಳು ತುಂಬಿದ್ದು ರೈತರ ಹಾಗೂ ಜನಸಾಮಾನ್ಯರ ಕೈಹಿಡಿದ್ದಾರೆ, ಇದಲ್ಲದೆ ಶಿರಾ ಶಿಕ್ಷಣ ಕಾಶಿ ಮಾಡುವತ್ತ ದೃಢ ನಿರ್ಧಾರ ಮಾಡಿದ್ದು, ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಗಲೇಬೇಕೆಂಬ ಉದ್ದೇಶದಿಂದ ಅನೇಕ ವಸತಿಶಾಲೆಗಳನ್ನು ತಂದಿರುವುದು ಇವರ ಶಿಕ್ಷಣ ಪ್ರೇಮಕ್ಕೆ ಇಡಿದ ಕೈಗನ್ನಡಿಯಾಗಿದೆ, ತಾಲ್ಲೂಕಿಗೆ ಸತತ 23 ವರ್ಷಗಳಿಂದ ಹೇಮಾವತಿ ನೀರು ಹರಿಯುತ್ತಿರುವ ಕಾರಣ ಬಹುತೇಕ ಎಲ್ಲಾ ಕೆರೆಗಳು ಹಾಗೂ 40 ಕ್ಕೂ ಅಧಿಕ ಬ್ರಿಡ್ಜ್ ಕಮ್ ಚೆಕ್ ಡ್ಯಾಮ್ ಗಳು ತುಂಬಿ ಹರಿಯುತ್ತಿದ್ದು ಅಂತರ್ಜಲ ಹೆಚ್ಚುವಲ್ಲಿ ಸಹಕಾರಿಯಾಗಿದ್ದು ಜಯಚಂದ್ರ ಅವರು ಅಭಿವೃದ್ಧಿ ಹರಿಕಾರ ಎಂಬ ಪದಕ್ಕೆ ನಿಜಾರ್ಥ ನೀಡಿದ್ದಾರೆ.

ಇಂತಹ ಮುತ್ಸದಿ ರಾಜಕಾರಣಿ ಸರ್ಕಾರದಲ್ಲಿ ಸಚಿವರಾಗಿದ್ದರೆ ರಾಜ್ಯಕ್ಕೆ ಕಳಸವಿತ್ತಂತೆ ಎಂದು ಶಿರಾ ಕ್ಷೇತ್ರದ ಜನತೆಯ ಒತ್ತಾಸೆಯಾಗಿದೆ, ಇವರ ಈ ರಾಜಕೀಯದ ಎಲ್ಲಾ ಸೇವೆ, ಅಭಿವೃದ್ಧಿ ಹಾಗೂ ಅನುಭವಗಳನ್ನು ಪರಿಗಣಿಸಿ ಸಚಿವ ಸ್ಥಾನ ನೀಡಲೇಬೇಕು ತಪ್ಪಿದರೆ ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟ ಮಾಡುವುದಾಗಿ ಸರ್ಕಾರಕ್ಕೆ ಎಚ್ಚರಿಕೇ ನೀಡುತಿದ್ದೇವೆ ಎಂದರು. ಅಪಾರ ಟಿ.ಬಿ. ಜಯಚಂದ್ರ ಅಭಿಮಾನಿಗಳು, ಪ್ರಮುಖ ನಾಯಕರು ಮುಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಮಕ್ಕಳು ಕೇವಲ ಅಂಕಗಳಿಸುವ ಯಂತ್ರಗಳಲ್ಲ, ಸಾಂಸ್ಕೃತಿಕ ಚೈತನ್ಯಗಳು : ಜಿಲ್ಲಾಧಿಕಾರಿ ಶುಭ ಕಲ್ಯಾಣ್

ತುಮಕೂರು: ವಿದ್ಯಾರ್ಥಿಗಳು ಕೇವಲ ಅಂಕ ಗಳಿಸುವ ಯಂತ್ರಗಳಾಗಬಾರದು, ಅವರು ಜೀವಂತಿಕೆ ತುಂಬಿರುವ ಸಾಂಸ್ಕೃತಿಕ ಚೈತನ್ಯಗಳಾಗಬೇಕು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಹೇಳಿದ್ದಾರೆ.

ನಗರದ ಅಮಾನಿಕೆರೆ ಆವರಣದ ಗಾಜಿನ ಮನೆಯಲ್ಲಿ ಆಯೋಜಿಸಲಾಗಿದ್ದ 17ನೇ ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆದ ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಮಕ್ಕಳ ಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಮಕ್ಕಳೇ ಮುಂದಿನ ಪ್ರಜೆಗಳಾಗಿದ್ದು, ಹಿರಿಯರು ನಾಡಿಗೆ ನೀಡಿದ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯ ಪರಿಚಯವನ್ನು ಮಕ್ಕಳು ಮಾಡಿಕೊಳ್ಳಬೇಕು. ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆಯ ಮಹತ್ವವನ್ನು ಸಾರುವುದೇ ಈ ಗೋಷ್ಠಿಯ ಮುಖ್ಯ ಉದ್ದೇಶವಾಗಿದೆ ಎಂದರು.

ಕನ್ನಡವನ್ನು 9ನೇ ಶತಮಾನದ ಆದಿಕವಿ ಪಂಪನಿಂದ ಹಿಡಿದು ರಾಷ್ಟ್ರಕವಿ ಕುವೆಂಪುವರೆಗೆ ನೂರಾರು ಸಾಹಿತಿಗಳು ಕನ್ನಡವನ್ನು ಬೆಳೆಸಿದ್ದಾರೆ. 12ನೇ ಶತಮಾನದಲ್ಲಿ ಬಸವಕಲ್ಯಾಣದಲ್ಲಿ ನಡೆದ ಸಾಹಿತ್ಯ ಕ್ರಾಂತಿಯಲ್ಲಿ ತುಮಕೂರು ಜಿಲ್ಲೆಯವರ ಪಾತ್ರ ದೊಡ್ಡದಿದೆ ಎಂಬುದು ಹೆಮ್ಮೆಯ ವಿಷಯವಾಗಿದೆ ಎಂದರು.

ಡಾ. ರಾಜ್‌ಕುಮಾರ್ ಹಾಗೂ ನರಸಿಂಹರಾಜು ಅವರಂತಹ ಶ್ರೇಷ್ಠ ನಟರನ್ನು ಜಗತ್ತಿಗೆ ಪರಿಚಯಿಸಿದ ಡಾ. ಗುಬ್ಬಿ ವೀರಣ್ಣ ಅವರು ನಮ್ಮ ಜಿಲ್ಲೆಯವರು. ನಟಿ ಮಂಜುಳಾ ಮತ್ತು ಉಮಾಶ್ರೀ ಅವರೂ ಜಿಲ್ಲೆಯವರೇ ಆಗಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ಹಲವಾರು ದಶಕಗಳಿಂದ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಪ್ರಸಾರಕ್ಕಾಗಿ ಹಗಲಿರುಳು ಶ್ರಮಿಸುತ್ತಿದೆ. ಶಾಲಾ–ಕಾಲೇಜುಗಳಲ್ಲಿ ಉಪನ್ಯಾಸಗಳು ಮತ್ತು ಕೃತಿ ಪ್ರಕಟಣೆಗಳ ಮೂಲಕ ಜಿಲ್ಲೆಯ ಸಾಹಿತ್ಯಿಕ ವಾತಾವರಣವನ್ನು ಜೀವಂತವಾಗಿರಿಸಿದೆ ಎಂದು ಶ್ಲಾಘಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ. ಪ್ರಭು ಮಾತನಾಡಿ, ಸಮಾಜವು ತನ್ನ ಉಜ್ವಲ ಭವಿಷ್ಯದ ಕನಸುಗಳನ್ನು ಕಾಣುತ್ತಾ ಪ್ರಗತಿಯತ್ತ ಸಾಗುತ್ತದೆ. ಸಮಾಜದ ಭವಿಷ್ಯದ ಆಧಾರ ಸ್ತಂಭಗಳೇ ಇಂದಿನ ಮಕ್ಕಳು. ಅವರಿಗೆ ಕನ್ನಡದ ಸೊಗಡನ್ನು ಪರಿಚಯಿಸಲು ಈ ಸಾಹಿತ್ಯ ಸಮ್ಮೇಳನವು ಒಂದು ಕನ್ನಡದ ಹಬ್ಬವಾಗಬೇಕೆಂಬ ಉದ್ದೇಶದಿಂದ ಶಾಲಾ ಮಕ್ಕಳಿಗಾಗಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಮಕ್ಕಳ ಗೋಷ್ಠಿಗಳನ್ನು ಆಯೋಜಿಸಲಾಗಿದೆ ಎಂದು ಹೇಳಿದರು.





ಇಲ್ಲಿಯವರೆಗೆ ನಡೆದಿರುವ ಎಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳ ಮೂಲ ಆಶಯ ಭಾಷೆಯನ್ನು ಶ್ರೀಮಂತಗೊಳಿಸುವುದಾಗಿದ್ದು, ಕೇವಲ ಭಾಷೆಯಷ್ಟೇ ಅಲ್ಲದೆ, ನಮ್ಮ ನಾಡಿನ ಭವ್ಯ ಪರಂಪರೆ, ಸಂಸ್ಕೃತಿ ಮತ್ತು ಸಂಸ್ಕಾರವನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದು ಈ ಸಮ್ಮೇಳನಗಳ ಮುಖ್ಯ ಗುರಿಯಾಗಿದೆ ಎಂದರು.

ನಮ್ಮ ದೈನಂದಿನ ಆಚಾರ–ವಿಚಾರಗಳು, ನಾವು ಆಚರಿಸುವ ಹಬ್ಬ–ಹರಿದಿನಗಳು ಹಾಗೂ ನಮ್ಮ ಸಾಮಾಜಿಕ ಸಂಬಂಧಗಳಲ್ಲಿ ಕನ್ನಡ ಭಾಷೆಯು ಹಾಸುಹೊಕ್ಕಾಗಿದೆ. ನಾವು ತೊಡುವ ಉಡುಗೆ–ತೊಡುಗೆ, ಗ್ರಾಮೀಣ ಕ್ರೀಡೆಗಳು ಹಾಗೂ ವೈವಿಧ್ಯಮಯ ಜನಪದ ಕಲೆಗಳಲ್ಲಿ ನಮ್ಮ ಭಾಷೆಯ ಅಸ್ತಿತ್ವ ಅಡಗಿದೆ. ಭಾಷೆ ಎನ್ನುವುದು ಕೇವಲ ಸಂವಹನ ಮಾಧ್ಯಮವಲ್ಲ, ಅದು ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ ಎಂದ ಅವರು, ಮಕ್ಕಳ ಮನಸ್ಸಿನಲ್ಲಿ ಕನ್ನಡ ಭಾಷೆಯ ಸಂಸ್ಕಾರ, ಕಲೆ ಮತ್ತು ಸಾಹಿತ್ಯದ ಬಗ್ಗೆ ಅಭಿರುಚಿಯನ್ನು ಮೂಡಿಸಿ, ಅವುಗಳ ಬೇರುಗಳು ಗಟ್ಟಿಯಾಗಿ ಇಳಿಯುವಂತೆ ಮಾಡಿದರೆ ಮಾತ್ರ ಭಾಷೆ ಸುಸ್ಥಿರವಾಗಿ ಉಳಿಯಲು ಸಾಧ್ಯ ಎಂದು ಹೇಳಿದರು.

ಮಕ್ಕಳಿಗೆ ಗ್ರಾಮೀಣ ಬದುಕಿನ ಸೊಗಡು ಹಾಗೂ ಕನ್ನಡ ಸಾಹಿತ್ಯದ ವಿವಿಧ ಆಯಾಮಗಳ ಬಗ್ಗೆ ಜಾಗೃತಿ ಮೂಡಿಸಿದಾಗ ಭಾಷೆಯ ಸಂರಕ್ಷಣೆ ಸಾಧ್ಯವಾಗುತ್ತದೆ. ಕನ್ನಡ ಸಾಹಿತ್ಯ ಸಮ್ಮೇಳನಗಳು ಕೇವಲ ನಗರ ಪ್ರದೇಶಗಳಿಗೆ ಸೀಮಿತವಾಗಬಾರದು. ಇವು ಗ್ರಾಮೀಣ ಮಟ್ಟಕ್ಕೂ ತಲುಪಬೇಕು. ಮುಂದಿನ ದಿನಗಳಲ್ಲಿ ಜಿಲ್ಲೆಯ ಎಲ್ಲಾ 330 ಗ್ರಾಮ ಪಂಚಾಯಿತಿಗಳಲ್ಲಿಯೂ ಇಂತಹ ಸಾಹಿತ್ಯ ಹಬ್ಬಗಳು ಆಚರಿಸಲ್ಪಡಬೇಕು. ಈ ಮೂಲಕ ಹಳ್ಳಿಯ ಜನಪದ ಕಲೆ, ಸಾಹಿತ್ಯ ಮತ್ತು ಕ್ರೀಡೆಗಳಿಗೆ ಸೂಕ್ತ ವೇದಿಕೆ ಕಲ್ಪಿಸಿಕೊಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.



ಹೇಮಾ, ಕರ್ನಾಟಕ ಪಬ್ಲಿಕ್ ಸ್ಕೂಲ್, ನೊಣವಿನಕೆರೆ

ಮೊಬೈಲನ್ನು ಬಳಕೆ ಮಾಡಿ ಆಟದ ಮೈದಾನಗಳನ್ನು ಮರೆತಿದ್ದಾರೆ. ಪುಸ್ತಕಗಳ ಸುವಾಸನೆಯನ್ನು ಮರೆತಿದ್ದಾರೆ. ತಂದೆ–ತಾಯಿಯ ಮಾತು ಕೇಳದೆ ಗಂಟೆ ಗಟ್ಟಲೆ ಮೊಬೈಲಿನಲ್ಲಿ ಮುಳುಗಿ ಹೋಗಿದ್ದಾರೆ.

ಅತಿಯಾದ ಮೊಬೈಲ್ ಬಳಕೆ ಕಣ್ಣಿನ ಸಮಸ್ಯೆ, ನಿದ್ರಾಹೀನತೆ, ಮಾನಸಿಕ ಒತ್ತಡ, ಕೋಪ, ಆಟ, ಏಕಾಂತತೆ, ಅಶ್ಲೀಲ ಹಾಗೂ ಹಿಂಸಾತ್ಮಕ ವಿಷಯಗಳ ಪ್ರಭಾವ ಹೆಚ್ಚಾಗುತ್ತದೆ. ಅದರಿಂದ ಇವೆಲ್ಲವೂ ಮಕ್ಕಳ ಭವಿಷ್ಯಕ್ಕೆ ಬಾರಿ ಹೊಡೆತ ಬೀರುತ್ತವೆ.

ಕಾವ್ಯ, ಕಲ್ಪತರು ಸೆಂಟ್ರಲ್ ಕಾಲೇಜು ತಿಪಟೂರು

ಕನ್ನಡ ನಾಡಿನಲ್ಲಿ ಬೇರೆ ಭಾಷೆಯ ಪ್ರಭಾವ ಅತಿಥಿಯಾಗಿರಬೇಕೇ ಹೊರತು, ಯಜಮಾನಿಯಾಗಲ್ಲ. ಕನ್ನಡ ನಮ್ಮ ತಾಯಿ. ಕನ್ನಡಿಗರು ತಾಯಿಯ ಕಾವಲುಗಾರರಬೇಕು, ಕನ್ನಡ ಬಳಸಿ ಉಳಿಸಿ ಬೆಳೆಸುವುದು ನಮ್ಮ ಕರ್ತವ್ಯ. ಕನ್ನಡ ಪ್ರಾಚೀನ ಭಾಷೆಗಳಲ್ಲಿ ಒಂದಾಗಿದ್ದು 2 ಸಾವಿರ ವರ್ಷಗಳ ಪ್ರಾಚೀನವಾದದ್ದು. ಕನ್ನಡ ಭಾಷೆಯಲ್ಲಿ ಕಾವ್ಯ ರಚನೆಯಾಗುವ ಸಂದರ್ಭದಲ್ಲಿ ಎಷ್ಟೋ ಭಾಷೆಗಳು ಹುಟ್ಟೇ ಇರಲಿಲ್ಲ. ಕನ್ನಡ ತರ್ಕಬದ್ಧವಾದ ಲಿಪಿಯನ್ನು ಹೊಂದಿದೆ. ಒಂದು ಕಾಲದಲ್ಲಿ ಕನ್ನಡ ಭಾಷೆ ರಾಜನಾಗಿ ಅನೇಕ ಸಾಮ್ರಾಜ್ಯಗಳ ರಾಜ್ಯ ಭಾಷೆಯಾಗಿ ಮೆರೆದು ಇಂದು ಅಳಿವಿನ ಹಂಚಿನಲ್ಲಿದೆ.

ಸಹನಾ ಸಿ. ಪಿ.ಜಿ ಜಿ ಹೆಚ್ ಎಸ್ ಚೇಳೂರು

ಕನ್ನಡ ಸಾಹಿತ್ಯ ಸಮ್ಮೇಳನವು 1915 ರಿಂದ ಪ್ರತಿ ವರ್ಷ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಆಯೋಜಿಸಲ್ಪಡುತ್ತಿರುವ ಮಹತ್ವದ ಸಾಂಸ್ಕೃತಿಕ ಚಳುವಳಿಯಾಗಿದೆ. ಕನ್ನಡ ಭಾಷೆಯ ಅಭಿವೃದ್ಧಿ, ಕನ್ನಡಿಗರ ಏಕೀಕರಣ ಹಾಗೂ ಕನ್ನಡ ಸಂಸ್ಕೃತಿಯ ಸಂರಕ್ಷಣೆಗೆ ದೀರ್ಘಕಾಲದಿಂದ ಬೃಹತ್ ವೇದಿಕೆಯಾಗಿರುವ ಈ ಸಮ್ಮೇಳನದಲ್ಲಿ ಮಕ್ಕಳ ಗೋಷ್ಠಿ, ಕವಿಗೋಷ್ಠಿ, ಪುಸ್ತಕ ಪ್ರದರ್ಶನ ಸೇರಿದಂತೆ ಅನೇಕ ಸಾಹಿತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಎರಡು ದಿನಗಳ ಕಾಲ ಜರುಗುತ್ತವೆ. ಇದರ ಹಿನ್ನೆಲೆಯನ್ನು ನೋಡಿದರೆ ಮೈಸೂರು ಆರ್ಥಿಕ ಸಮ್ಮೇಳನದ ಸಂದರ್ಭದಲ್ಲಿ ಕನ್ನಡ ಭಾಷೆಯ ಉತ್ತೇಜನಕ್ಕಾಗಿ ಎಂ. ಶಾಮರಾವ್, ಕರ್ಪೂರ ಶ್ರೀನಿವಾಸರಾವ್, ಪಿ.ಎಸ್. ಆಚಿತ್ತರಾವ್ ಸೇರಿದಂತೆ ಹಲವರನ್ನು ಒಳಗೊಂಡ ಉಪಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ಕನ್ನಡನಾಡಿನ ವಿದ್ವಾಂಸರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿ, ನಂತರದಿಂದಲೇ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಿಯಮಿತವಾಗಿ ಆಯೋಜಿಸುವ ಪರಿಪಾಠ ಆರಂಭವಾಯಿತು. ಕನ್ನಡಕ್ಕಾಗಿ ಅವಿರತ ಸೇವೆ ಸಲ್ಲಿಸಿರುವ ಕವಿಗಳು ಹಾಗೂ ಸಾಹಿತಿಗಳನ್ನು ಗುರುತಿಸಿ ಅವರಿಗೆ ಸಮ್ಮೇಳನಾಧ್ಯಕ್ಷರ ಗೌರವ ನೀಡಲಾಗುವುದು ಎಂಬುದು ಈ ಸಮ್ಮೇಳನದ ವಿಶಿಷ್ಟ ಪರಂಪರೆಯಾಗಿದೆ.

ಸಮಾರಂಭದಲ್ಲಿ ಸಮ್ಮೇಳನದ ಅಧ್ಯಕ್ಷ ಡಾ: ಕರೀಗೌಡ ಬೀಚನಹಳ್ಳಿ, ವೃತ್ತಿ ತರಬೇತಿ ನಿಗಮ ಮಂಡಳಿಯ ಅಧ್ಯಕ್ಷ ಮುರುಳಿಧರ ಹಾಲಪ್ಪ, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ರಘುಚಂದ್ರ, ಮಧುಗಿರಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಾಧವ ರೆಡ್ಡಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ವೈಕುಂಠ ಏಕದಶಿ ದೈವಿಕ ಹಿನ್ನೆಲೆ ಏಕಿಷ್ಟು ಮಹತ್ವ : ನಾಡಿಲ್ಲೆಡೆ ಗೋವಿಂದನ ನಾಮಸ್ಮರಣೆ

ಕಲ್ಪಾಂತ್ಯದಲ್ಲಿ ಮಹಾವಿಷ್ಣು ವಟಪತ್ರಶಾಯಿಯಾಗಿ ಯೋಗನಿದ್ರೆಯಲ್ಲಿದ್ದಾಗ ಆತನ ಕಿವಿಯ ಗುಗ್ಗೆಯಿಂದ (ಕರ್ಣಮಲ) ಇಬ್ಬರು ರಾಕ್ಷಸರು ಜನಿಸುತ್ತಾರೆ. ಬ್ರಹ್ಮನ ಪ್ರೇರಣೆಯಿಂದ ಅವರಲ್ಲಿ ವಾಯುಸಂಚಾರವಾಗುತ್ತದೆ. ರಕ್ಷಸರಾಗಿ ಬಲಶಾಲಿಗಳಾದ ಅವರು ಮಹಾಬಲರಾಗಿ ದೇವಲೋಕವನ್ನೇ ವಶಪಡಿಸುತ್ತಾರೆ. ಬ್ರಹ್ಮ ಅವರನ್ನು ಸ್ಪರ್ಶಿಸಿ ನೋಡಲು ಒಬ್ಬ ಮೃದುವಾಗಿ ಕಂಡ. ಅವನೇ ಮಧು. ಮತ್ತೊಬ್ಬ ಕಲ್ಲಿನಂತೆ ಕರ್ಕಶವಾಗಿ ಕಂಡ. ಅವನೇ ಕೈಟಭ.ಪರಾಕ್ರಮಿಗಳಾದ ಮಧು ಕೈಟಭ ಇವರನ್ನು ವಿಷ್ಣು ಸಂಹರಿಸಿದ. ವೈಕುಂಠ ಲೋಕದ ಉತ್ತರ ದ್ವಾರದ ಮೂಲಕ ಅವರನ್ನು ಪ್ರವೇಶಿಸುವಂತೆ ಮಾಡಿ ಸದ್ಗತಿಯನ್ನು ಕರುಣಿಸುತ್ತಾನೆ. ಸದ್ಗತಿಯಲ್ಲಿ ಕರುಣಿಸಿದ್ದು ಏಕಾದಶಿಯಂದು. ಈ ಕಾರಣಕ್ಕೆ ವೈಕುಂಠ ಏಕಾದಶಿಯಂದು (ಗಿಚಿಇಞಚಿಟಿಣಚಿ ಇಞಚಿಜಚಿಜಞ) ವಿಶೇಷ ದ್ವಾರವನ್ನು ನಿರ್ಮಿಸಿ, ಅದರ ಮೂಲಕ ಪ್ರವೇಶಿಸಿ ದೇವರ ದರ್ಶನ ಪಡೆಯುವ ಆಚರಣೆ ಇಂದು ಪ್ರಚಲಿತಕ್ಕೆ ಬಂದಿದೆ. ಭಕ್ತಿಪೂರ್ವಕವಾಗಿ ದೇವರಿಗೆ ಶರಣಾದರೆ ಸದ್ಗತಿ ಸಿಗುತ್ತದೆ ಎಂಬ ನಂಬಿಕೆಯಿದೆ.

**ಅಮೃತ ಸಿಕ್ಕಿದ ದಿನ:**

ಒಂದು ದಿನ ಋಷಿ ದೂರ್ವಾಸ ಇಂದ್ರನ ಆಸ್ಥಾನಕ್ಕೆ ಬಂದು ಬಹಳ ಗೌರವದಿಂದ ಇಂದ್ರನಿಗೆ ಹೂವಿನ ಹಾರವನ್ನು ಅರ್ಪಿಸುತ್ತಾನೆ. ಇಂದ್ರನು ಆ ಹಾರವನ್ನು ತೆಗೆದುಕೊಂಡು ತನ್ನ ಆನೆಯ ಐರಾವತದ ಹಣೆಯ ಮೇಲೆ ಇಡುತ್ತಾನೆ. ಆನೆಯು ಹಾರವನ್ನು ಸೊಂಡಿಲಿನಿಂದ ತೆಗೆದುಕೊಂಡು ಭೂಮಿಯ ಮೇಲೆ ಎಸೆಯುತ್ತದೆ.

ನಾನು ನೀಡಿದ ಹಾರಕ್ಕೆ ಅಗೌರವ ತೋರಿದ್ದಕ್ಕೆ ಸಿಟ್ಟಾದ ದೂರ್ವಾಸ ಮುನಿ ಕೋಪಗೊಂಡು, ನಿನಗೆ ಅಹಂಕಾರ ಬಂದಿದೆ. ಹೇಗೆ ನನ್ನ ಹಾರವನ್ನು ನೆಲಕ್ಕೆ ಎಸೆದು ಹಾಳು ಮಾಡಿದೆಯೋ ಅದೇ ರೀತಿ ನಿನ್ನ ರಾಜ್ಯವು ಹಾಳಾಗಲಿ ಎಂದು ಇಂದ್ರನಿಗೆ ಶಾಪವನ್ನು ಕೊಡುತ್ತಾನೆ. ದೂರ್ವಾಸನ ಶಾಪದ ಪರಿಣಾಮ ದೇವತೆಗಳು ತಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತಾರೆ. ಎಲ್ಲಾ ತರಹದ ಉತ್ಪನ್ನಗಳು ಮತ್ತು ಸಸ್ಯಗಳು ಸಾಯಲು ಪ್ರಾರಂಭಿಸುತ್ತವೆ, ಪುರುಷರು ದಾನ ಮಾಡುವುದನ್ನು ನಿಲ್ಲಿಸುತ್ತಾರೆ, ಮನಸ್ಸುಗಳು ಭ್ರಷ್ಟವಾಗುತ್ತವೆ, ಜನರು ಅಂತಿಮ ಇಂದ್ರಿಯ ಸುಖಗಳಲ್ಲಿ ತೊಡಗಲು ಪ್ರಾರಂಭಿಸುತ್ತಾರೆ. ಅಮರಾವತಿಯಲ್ಲಿ ದೇವರುಗಳು ದುರ್ಬಲರಾಗುತ್ತಿದ್ದಂತೆ, ರಾಕ್ಷಸರು ದೇವತೆಗಳ ಮೇಲೆ ದಾಳಿ ಮಾಡಿ ಅವರನ್ನು ಸೋಲಿಸುತ್ತಾರೆ.

ಸೋತ ನಂತರ ಇಂದ್ರಾದಿ ದೇವತೆಗಳು ವಿಷ್ಣುವಿನ ಬಳಿ ಹೋಗಿ ಮೊರೆ ಇಡುತ್ತಾರೆ. ಆಗ ಅಮೃತ ಪಡೆಯಬೇಕೆಂದು ಹೇಳಿದ ವಿಷ್ಣು ನೀವು ಮತ್ತು ರಾಕ್ಷಸರು ಸಮುದ್ರ ಮಂಥನ ಮಾಡಬೇಕು ಎಂದು ಸೂಚಿಸುತ್ತಾನೆ. ವೈಕುಂಠ ಏಕಾದಶಿಯ ಪವಿತ್ರ ದಿನದಂದು ಸಾಗರ ಮಂಥನವನ್ನು ನಡೆಯಿತು. ದೇವರು




ಮತ್ತು ರಾಕ್ಷಸರು ಅಮೃತಕ್ಕಾಗಿ ಕ್ಷೀರ ಸಮುದ್ರವನ್ನು ಮಥನ ಮಾಡಿದಾಗ ಮೊದಲು ಕಠೋರವಾದ ವಿಷ ಜನಿಸಿತು. ನಂತರ ಜೇಷ್ಠಾದೇವಿ ಜನಿಸಿದಳು. ಬಳಿಕ ಲಕ್ಷ್ಮೀ ಪಾಲ್ಗಡಲಿಂದ ಹೊರಬಂದಳು.ಕೊನೆಯದಾಗಿ ಸಿಕ್ಕಿದ್ದು ಅಮೃತ. ಕ್ಷೀರ ಸಾಗರದಲ್ಲಿ ಸಿಕ್ಕಿದ ಅಮೃತವನ್ನು ಮೋಹಿನಿ ರೂಪದಲ್ಲಿದ್ದ ವಿಷ್ಣು ದೇವತೆಗಳಿಗೆ ನೀಡಿದಳು

ಅಮೃತ ಸಿಕ್ಕಿದ ಈ ಮಂಗಳರ ದಿನದಂದು ಮೃತಪಡುವ ಜನರು ಜನನ ಮತ್ತು ಮರಣ ಚಕ್ರದಿಂದ ಮುಕ್ತರಾಗುತ್ತಾರೆ ಮತ್ತು ಭಗವಾನ್ ವಿಷ್ಣುವಿನ ನಿವಾಸ ಅಥವಾ ವೈಕುಂಠ ಧಾಮವನ್ನು ತಲುಪುತ್ತಾರೆ ಎಂಬುದು ನಂಬಿಕೆ.

ಹಿಂದೂ ಧರ್ಮದಲ್ಲಿ ಏಕಾದಶಿಗೆ ವಿಶೇಷ ಮಹತ್ವವಿದೆ. ಈ ದಿನ ಕಠಿಣ ಉಪವಾಸ ವ್ರತ ಆಚರಿಸುವ ಮೂಲಕ ದೇವರ ಕೃಪೆಗೆ ಪಾತ್ರರಾಗುತ್ತಾರೆ. ಅಲ್ಲದೆ ಆ ದಿನದಂದು ಭಗವಾನ್ ವಿಷ್ಣುವಿಗೆ ಭಕ್ತಿ ಹಾಗೂ ಸಮರ್ಪಣಾ ಭಾವದಿಂದ ಪೂಜೆ ಸಲ್ಲಿಸಲಾಗುತ್ತದೆ.

ಏಕಾದಶಿ ವ್ರತವನ್ನು ಯಾರು ಭಕ್ತಿಯಿಂದ ಆಚರಿಸುತ್ತಾರೋ ಅವರ ಎಲ್ಲಾ ಕಷ್ಟಗಳು ಹಾಗೂ ಸಮಸ್ಯೆಗಳನ್ನು ವಿಷ್ಣು ಪರಿಹಾರ ಮಾಡುತ್ತಾನೆ. ಅದರಲ್ಲೂ ವೈಕುಂಠ ಏಕಾದಶಿ ಸಮಯದಲ್ಲಿ ವಿಷ್ಣುವಿನ ನೆಲೆಯಾದ ವೈಕುಂಠದ ದ್ವಾರಗಳು ತೆರೆಯುತ್ತದೆ. ಈ ವಿಶೇಷ ದಿನದಂದು ವಿಷ್ಣು ದೇವಸ್ಥಾನಕ್ಕೆ ಹೋಗಿ ಪ್ರಾರ್ಥಿಸಿದರೆ ಮೋಕ್ಷ ಸಿಗುತ್ತದೆ ಎಂಬ ನಂಬಿಕೆಯಿದೆ.

ಹಿಂದೂ ಧರ್ಮದಲ್ಲಿ ವೈಕುಂಠ ಏಕಾದಶಿಯು ಪ್ರತಿವರ್ಷ ಆಚರಿಸಲಾಗುವ ಒಂದು ಪ್ರಮುಖ ಹಬ್ಬವಾಗಿದೆ. ಇದನ್ನು ಮುಕ್ತಿಕೊಡುವ ಹಬ್ಬ ಎಂದೂ ಕರೆಯುತ್ತಾರೆ. ಧನುರ್ಮಾಸದ ಶುಕ್ಲಪಕ್ಷದಲ್ಲಿ ಬರುವ ಹನ್ನೊಂದನೆಯ ದಿನವನ್ನು ವೈಕುಂಠ ಏಕಾದಶಿ ಎಂದು ಕರೆಯಲಾಗುತ್ತದೆ. ಈ ಶುಭ ದಿನದಂದು, ವಿಷ್ಣುವಿನ ವಾಸಸ್ಥಾನವಾದ ವೈಕುಂಠದ ದ್ವಾರಗಳು ಭಕ್ತರಿಗಾಗಿ



ತೆರೆದಿರುತ್ತವೆ. ಈ ಏಕಾದಶಿಯನ್ನು "ಮುಕ್ಕೋಟಿ ಏಕಾದಶಿ, "ಮೋಕ್ಷ ಏಕಾದಶಿ', "ಪುತ್ರದಾ ಏಕಾದಶಿ' ಎಂದೂ ಕರೆಯುತ್ತಾರೆ. ವರ್ಷದಲ್ಲಿ 24 ಏಕಾದಶಿಗಳು ಬರುತ್ತವೆ. ಪ್ರತಿಯೊಂದಕ್ಕೂ ಬೇರೆ ಬೇರೆ ಹೆಸರುಗಳಿದ್ದು, ಅದರದ್ದೇ ಆದ ಮಹತ್ವವನ್ನು ಹೊಂದಿವೆ. ಅದರಲ್ಲೂ ವೈಕುಂಠ ಏಕಾದಶಿಗೆ ಮತ್ತು ಈ ದಿನದಂದು ಕೈಗೊಳ್ಳುವ ವ್ರತಾಚರಣೆ ಬಲುಶ್ರೇಷ್ಠ ವಾದುದಾಗಿದೆ ಎಂದು ಧರ್ಮಶಾಸ್ತ್ರಗಳಲ್ಲಿ ಹೇಳಲಾಗಿದೆ.

ಪುನರ್ದೈತ್ಯಂ ಸಮಾಯಾಂತಂ ದೃಷ್ಟಾ ದೇವಾಃ ಸವಾಸವಾಃ।
ಭಯಪ್ರಕಂಪಿತಾಃ ಸರ್ವೇ । ವಿಷ್ಣು ಸ್ತೋತುಂ ಪ್ರಚಕ್ರಮುಃ ॥

ವೈಕುಂಠ ಏಕಾದಶಿ ವ್ರತಾಚರಣೆ ಮಾಡಿ ವಿಷ್ಣುವನ್ನು ಸ್ತುತಿಸಿದರೆ ಭಯ ದೂರವಾಗಿ ಮೋಕ್ಷ ಪ್ರಾಪ್ತಿಯಾಗುತ್ತದೆ. ಮರುದಿನ ಮುಕ್ಕೋಟಿ ದ್ವಾದಶಿಯಂದು ಮುಕ್ಕೋಟಿ ದೇವತೆಗಳು ನಮ್ಮನ್ನು ಹರಸುವರು ಎಂಬ ನಂಬಿಕೆಯಿದೆ.

**ವೈಕುಂಠ ಎಂದರೇನು?**

ಭೌತಿಕ ಜಗತ್ತಿನೊಳಗೆ ಕೋಟ್ಯಂತರ ವಿಶ್ವಗಳಿವೆ. ಅದರಲ್ಲಿ ನಮ್ಮ ಬ್ರಹ್ಮಾಂಡವು ಅದರ ಒಂದು ಅತ್ಯಲ್ಪ ಭಾಗ ಮಾತ್ರ. ಪ್ರತಿಯೊಂದು ವಿಶ್ವವು ಕೋಟ್ಯಂತರ ಗ್ರಹಗಳನ್ನು ಒಳಗೊಂಡಿದೆ. ಎಲ್ಲ ವಿಶ್ವಗಳು ಒಟ್ಟಾಗಿ ಭಗವಂತನ ಒಟ್ಟು ಸೃಷ್ಟಿಯ ನಾಲ್ಕನೇ ಒಂದು ಭಾಗವನ್ನು ಮಾತ್ರ ರೂಪಿಸುತ್ತವೆ. ಭಗವಾನ್ ವಿಷ್ಣುವಿನ ವಾಸಸ್ಥಾನವಾದ ವೈಕುಂಠವು ಭೌತಿಕ ಸೃಷ್ಟಿಯ ಆಚೆ ಇದೆ. ವೈಕುಂಠವೆಂದರೆ ಆತಂಕಗಳಿಂದ ಸಂಪೂರ್ಣವಾಗಿ ಮುಕ್ತವಾದ ಸ್ಥಳ ಎಂದರ್ಥ. ಈ ಭೌತಿಕ ಪ್ರಪಂಚವು ದುಃಖ, ರೋಗ, ವೃದ್ಧಾಪ್ಯ ಮತ್ತು ಮರಣ ಭಯಗಳಿಂದ ನಿರೂಪಿಸಲ್ಪಟ್ಟಿದೆ. ಇದರಿಂದ ಮುಕ್ತಿ ಪಡೆಯಲು ವಿಷ್ಣುಭಕ್ತಿ ಮಾಡಿ ವೈಕುಂಠ ಲೋಕ ಸೇರಬೇಕು. ವೈಕುಂಠ ಲೋಕ ಪ್ರಾಪ್ತಿಯಾಗುವ ಆತ್ಮಗಳಿಗೆ ಅಂತಹ ಯಾವುದೇ ಸಂಕಷ್ಟಗಳಿರುವುದಿಲ್ಲ. ಅವರು ಭಗವಂತನ ಸೇವೆಯಲ್ಲಿ ಶಾಶ್ವತವಾಗಿ ಆಧ್ಯಾತ್ಮಿಕ ಆನಂದವನ್ನು ಹೊಂದುತ್ತಾರೆ.

ವೈಕುಂಠ ಏಕಾದಶಿಯ ಮಹತ್ವ

ವೈಕುಂಠ ಏಕಾದಶಿ ಉಪವಾಸದ ವಿಶೇಷವೆಂದರೆ ಇಡೀ ವರ್ಷದಲ್ಲಿ ಬರುವ ಏಕಾದಶಿ ವ್ರತ ಮಾಡದೆ ಇದ್ದವರು ಈ ಒಂದು ದಿನ ಮಾಡಿದರೆ ವಿಶೇಷ ಫಲ ಪ್ರಾಪ್ತಿಯಾಗುತ್ತದೆ. ಏಕೆಂದರೆ ಮಹಾ ವಿಷ್ಣು "ಮುರಾ' ಎಂಬ ರಾಕ್ಷಸನನ್ನು "ಏಕಾದಶ' ಎಂಬ ತನ್ನ ಆಯುಧದಿಂದ ಸಂಹಾರ ಮಾಡಿದ ದಿನವಿದು. ಹಾಗೆಯೇ ಕ್ಷೀರಸಾಗರ ಮಂಥನ ಮಾಡಿದಾಗ ಉದ್ಭವಿಸಿದ ಅಮೃತ ಸೇವಿಸಿ ದೇವತೆಗಳು ಅಮರರಾದ ದಿನ, ಪಿತಾಮಹ ಭೀಷ್ಮರು ವಿಷ್ಣು ಸಹಸ್ರ ನಾಮವನ್ನು ಬೋಧಿಸಿದ ದಿನವೂ ವೈಕುಂಠ ಏಕಾದಶಿಯಾಗಿದೆ. ಹಾಗಾಗಿ ವೈಕುಂಠ ಏಕಾದಶಿ ವ್ರತ ಮಾಡುವುದರಿಂದ ಪಿತೃ ದೋಷ ಪರಿಹಾರವಾಗಿ ಸಂತತಿ ವೃದ್ಧಿಯಾಗುತ್ತದೆ.

**ಏಕಾದಶಿ ಆಚರಣೆ ಹೇಗೆ ಬಂತು?**

ಪದ್ಮಪುರಾಣದಲ್ಲಿ ವೈಕುಂಠ ಏಕಾದಶಿಯ ಮೂಲದ ಬಗ್ಗೆ ಉಲ್ಲೇಖಿಸಲಾಗಿದೆ. ಒಮ್ಮೆ ಮುರಾಸುರನೆಂಬ ಅಸುರನು ಬ್ರಹ್ಮನಿಂದ ವರ ಪಡೆದು ದೇವತೆಗಳಿಗೆ ತೊಂದರೆ ಕೊಡುತ್ತಿದ್ದನು. ದೇವತೆಗಳು ವಿಷ್ಣುವಿನ ಮೊರೆಹೋದರು. ವಿಷ್ಣು ಎಷ್ಟು ಯುದ್ಧ ಮಾಡಿದರೂ ಅಸುರನನ್ನು ಸೋಲಿಸಲಾಗಲಿಲ್ಲ. ಕೊನೆಗೆ ವಿಷ್ಣು ಬದರಿಕಾಶ್ರಮದ ಸಮೀಪದಲ್ಲಿರುವ "ಸಿಂಹಾವತಿ' ಎಂಬ ಗುಹೆಯ ಕಡೆಗೆ ಹೋದನು. ಮುರಾಸುರನು ಅವನನ್ನು ಬೆನ್ನಟ್ಟಿದನು. ಅಲ್ಲಿ ವಿಷ್ಣು ತನ್ನ ದೈವಿಕ ಶಕ್ತಿಯಿಂದ ದೇವತೆಯಾದ ಯೋಗಮಾಯಳನ್ನು ಕರೆದು ಅವಳಿಂದ ಅಸುರನನ್ನು ಸಂಹರಿಸಿದನು. ಯೋಗಮಾಯಳ ಪರಾಕ್ರಮಕ್ಕೆ ಸಂತೋಷಗೊಂಡ ವಿಷ್ಣು ಅವಳಿಗೆ "ಏಕಾದಶಿ' ಎಂಬ ವಿಶೇಷಣವನ್ನು ಅರ್ಪಿಸಿ, ಅವಳು ಭೂಮಿಯ ಎಲ್ಲ ಜನರ ಪಾಪಗಳನ್ನು ನಾಶಮಾಡಲು ಸಮರ್ಥಳಾಗಿದ್ದಾಳೆ ಎಂದು ಘೋಷಿಸಿದನು. ಹೀಗೆ ಮೊದಲ ಏಕಾದಶಿ ಅಸ್ತಿತ್ವಕ್ಕೆ ಬಂದಿತು. ಅದು ಧನುರ್ಮಾಸದ ಶುಕ್ಲಪಕ್ಷದ ಏಕಾದಶಿಯಾಗಿತ್ತು.

ಏಕಾದಶಿ ಮಹಾತ್ಮ

ಕಲ್ಪಾಂತ್ಯದಲ್ಲಿ ಮಹಾವಿಷ್ಣು ವಟಪತ್ರಶಾಯಿಯಾಗಿ ಯೋಗನಿದ್ರೆಯಲ್ಲಿದ್ದಾಗ ಆತನ ಕಿವಿಯ ಕಿಟ್ಟದಿಂದ ಇಬ್ಬರು ರಾಕ್ಷಸರು ಜನಿಸುತ್ತಾರೆ. ಬ್ರಹ್ಮ ಅವರನ್ನು ಸ್ಪರ್ಶಿಸಿ ನೋಡಲು ಒಬ್ಬ ಮೃದುವಾಗಿ ಕಂಡ. ಅವನೇ ಮಧು. ಮತ್ತೊಬ್ಬ ಕಲ್ಲಿನಂತೆ ಕರ್ಕಶವಾಗಿ ಕಂಡ. ಅವನೇ ಕೈಟಭ. ಬ್ರಹ್ಮನು ಅವರಿಗೆ ಪ್ರಾಣವಾಯು ನೀಡುತ್ತಾನೆ.ಅವರು ರಾಕ್ಷಸರಾಗಿ ಬಲಶಾಲಿಗಳಾಗಿ ದೇವಲೋಕವನ್ನೇ ವಶಪಡಿಸುತ್ತಾರೆ. ಅವರ ಉಪಟಳ ಕಂಡ ವಿಷ್ಣು ಅವರನ್ನು ಸಂಹರಿಸಿ ವೈಕುಂಠ ಲೋಕದ ಉತ್ತರ ದ್ವಾರದ ಮೂಲಕ ಪ್ರವೇಶಿಸುವಂತೆ ಮಾಡಿ ಸದ್ಗತಿಯನ್ನು ಕರುಣಿಸುತ್ತಾನೆ. ಅದು ಏಕಾದಶಿಯ ದಿನ. ಈ ಕಾರಣಕ್ಕೆ ವೈಕುಂಠ ಏಕಾದಶಿಯಂದು ದೇವಾಲಯಗಳಲ್ಲಿ ವಿಶೇಷ ದ್ವಾರವನ್ನು (ಸಪ್ತದ್ವಾರ) ನಿರ್ಮಿಸಿ, ಅದರ ಮೂಲಕ ಭಕ್ತರು ಪ್ರವೇಶಿಸಿ ದೇವರ ದರ್ಶನ ಪಡೆಯುವ ಆಚರಣೆ ಇಂದು ಪ್ರಚಲಿತಕ್ಕೆ ಬಂದಿದೆ. "ಅಹಂ' ತೊರೆದು ಭಕ್ತಿಪೂರ್ವಕವಾಗಿ ದೇವರಿಗೆ ಶರಣಾದರೆ ಸದ್ಗತಿ ಸಿಗುತ್ತದೆ ಎಂಬ ನಂಬಿಕೆಯಿದೆ.

ಏಕಾದಶಿ ವ್ರತಾಚರಣೆ ಮತ್ತು ಉಪಯೋಗಗಳು

ಏಕಾದಶಿ ವ್ರತವು ಮೂರು ದಿನಗಳದ್ದಾಗಿರುತ್ತದೆ. ಏಕಾದಶಿಯ ಮುನ್ನಾದಿನ ದಶಮಿಯಂದು ಶುದ್ಧಾಚರಣೆಯಲ್ಲಿದ್ದು ಮಧ್ಯಾಹ್ನ ಊಟ ಮಾತ್ರ ಮಾಡಿ ಸಂಜೆಯಿಂದ ಉಪವಾಸ ಅರಂಭಿಸಬೇಕು. ಮರುದಿನ ಏಕಾದಶಿ ಶುದ್ಧ ಉಪವಾಸವಿರಬೇಕು. ಲೌಕಿಕ ಜಂಜಾಟಗಳನ್ನು ದೂರವಿರಿಸಿ ಶುಚಿಭೂತರಾಗಿ ವಿಷ್ಣು–ಕೃಷ್ಣದೇವರ ಧ್ಯಾನ–ಪೂಜೆ–ಸ್ಮರಣೆಯಲ್ಲಿರಬೇಕು. ಮರುದಿನ ಏಕಾದಶಿ ತಿಥಿ ಎಷ್ಟಿದೆ ಎಂದು ನೋಡಿಕೊಂಡು ಅನಂತರ ದ್ವಾದಶಿ ತಿಥಿ ಬಂದಾಗ ದೇವರ ಪೂಜೆ ಮಾಡಿ ವ್ರತವನ್ನು ದೇವರಿಗೆ ಅರ್ಪಿಸಿ ನೈವೇದ್ಯವನ್ನು ಸ್ವೀಕರಿಸಿ ವ್ರತವನ್ನು ಸಮಾಪ್ತಿಗೊಳಿಸಬೇಕು. ಹೀಗೆ ಕಠಿನ ವ್ರತಾಚರಣೆ ಮಾಡಲು



ಸಾಧ್ಯವಾಗದವರು ಅಂದರೆ ಅಬಾಲವೃದ್ಧರು, ರೋಗಿಗಳು ಮಧ್ಯೆ ಪಾನೀಯಗಳನ್ನು ಅಲ್ಪಪ್ರಮಾಣದಲ್ಲಿ ಸ್ವೀಕರಿಸಬಹುದು. ವೈದ್ಯಕೀಯ ವಿಜ್ಞಾನದಲ್ಲೂ ಹದಿನೈದು ದಿನಗಳಿಗೊಮ್ಮೆ ಉಪವಾಸ ಮಾಡಿದರೆ ಆರೋಗ್ಯ ಸುಧಾರಣೆಯಾಗುತ್ತದೆ ಎಂದು ಹೇಳಲಾಗಿದೆ. ಜೀರ್ಣಾಂಗಗಳಿಗೆ ಸ್ವಲ್ಪ ವಿರಾಮ ಸಿಗುತ್ತದೆ. ದೇಹದಲ್ಲಿ ಉತ್ಪತ್ತಿಯಾಗಿರುವ ಹೆಚ್ಚಿನ ಕೊಬ್ಬು, ಜಿಡ್ಡಿನಾಂಶಗಳು ಕರಗಿ ಅಂಗಾಂಗಗಳು ಪುನಶ್ಚೇತನಗೊಳ್ಳುತ್ತವೆ. ವಾತ–ಪಿತ್ತ–ಕಫಗಳು ಕಡಿಮೆಯಾಗುತ್ತವೆ. ಹೃದಯಸಂಬಂಧಿ ರೋಗಗಳು ವಾಸಿಯಾಗುತ್ತವೆ ಎಂದಿದೆ. ಇಂದಿನ ಕಲಬೆರಕೆ ಆಹಾರ ಮತ್ತು ರೆಡಿಫುಡ್ ಯುಗದಲ್ಲಿ ಏಕಾದಶಿ ವ್ರತದ ನೆಪದಲ್ಲಾದರೂ ಉಪವಾಸ ಆಚರಿಸಿದರೆ ಎಲ್ಲರೂ ಆರೋಗ್ಯವಂತರಾಗುವರು. ಆದರೆ ಉಪವಾಸದ ನೆಪದಲ್ಲಿ ಊಟದಷ್ಟೇ ಫಲಾಹಾರ ಮಾಡಿದರೆ ಆರೋಗ್ಯವೂ ಕೆಡಬಹುದು ಎಂಬ ಎಚ್ಚರಿಕೆ ಅಗತ್ಯ.

**ವೈಕುಂಠ ಏಕಾದಶಿ ಯಾವಾಗ? ವ್ರತ ಮಹಿಮೆ ಏನು?**

ಏಕಾದಶಿಯಂದೇ ವೈಕುಂಠ ದ್ವಾರ ತೆರೆಯುವುದೇಕೆ?

ಈ ದಿನದ ಉಪವಾಸದಿಂದ ಜನನ–ಮರಣದ ಬಂಧನದಿಂದ ಮುಕ್ತಿ ಸಿಗುತ್ತದೆ ಮತ್ತು ವಿಷ್ಣುವಿನ ನಿತ್ಯ ನಿವಾಸವಾದ ವೈಕುಂಠ ಧಾಮವನ್ನು ಸೇರಬಹುದು. ದೇಹ ಮತ್ತು ಮನಸ್ಸನ್ನು ಶುದ್ಧೀಕರಿಸಿ, ಆತ್ಮಾವಲೋಕನ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಇದು ಸೂಕ್ತ ದಿನವಾಗಿದೆ.




ವೈಕುಂಠ ಏಕಾದಶಿ ವಿಷ್ಣುವಿಗೆ ಸಮರ್ಪಿತವಾದ ಪವಿತ್ರ ದಿನವಾಗಿದ್ದು, ಈ ದಿನದ ಉಪವಾಸವಿದ್ದು ಪೂಜೆ ಮಾಡಿದರೆ ಜನ್ಮ ಜನ್ಮಾಂತರದ ಪಾಪಗಳು ಕಳೆಯುತ್ತವೆ ಎಂಬ ನಂಬಿಕೆಯಿದೆ. ವೈಕುಂಠ ಏಕಾದಶಿ ವ್ರತ ಆಚರಿಸುವುದರಿಂದ, ಜನನ–ಮರಣ ಚಕ್ರದಿಂದ ಮುಕ್ತಿ (ಮೋಕ್ಷ) ನೀಡಿ, ವೈಕುಂಠದಲ್ಲಿ ಸ್ಥಾನ ಲಭಿಸುತ್ತದೆ. ಇದನ್ನು 'ಮೋಕ್ಷ ಏಕಾದಶಿ' ಎಂದೂ ಪ್ರಸಿದ್ಧವಾಗಿದೆ, ದೇಹ ಹಾಗೂ ಮನಸ್ಸನ್ನು ಶುದ್ಧೀಕರಿಸುತ್ತದೆ ಮತ್ತು ವಿಷ್ಣುವಿನ ಅನುಗ್ರಹ ಪಡೆಯಲು ಸಹಕಾರಿ ಎಂದು ನಂಬಲಾಗಿದೆ. ದೇಶದಾದ್ಯಂತ ಹಿಂದೂಗಳು ಈ ಪವಿತ್ರ ದಿನವನ್ನು ಅತ್ಯಂತ ಅದ್ದೂರಿಯಾಗಿ ಆಚರಿಸುತ್ತಾರೆ. ದೇಶದ ಮೂಲೆ ಮೂಲೆಯಲ್ಲಿರುವ ಪ್ರತಿಯೊಂದು ವಿಷ್ಣು ದೇವನ ದೇವಾಲಯದಲ್ಲೂ ವೈಕುಂಠ ಏಕಾದಶಿ ದಿನದಂದು ವಿಶೇಷ ಪ್ರಾರ್ಥನೆ, ಪೂಜೆ – ಪುನಸ್ಕಾರಗಳು, ಯಜ್ಞಗಳು, ಪ್ರವಚನೆ ಹಾಗೂ ವಿವಿಧ ರೀತಿಯಾದ ಧಾರ್ಮಿಕ



ಆವಚರಣೆಗಳನ್ನು ನಡೆಸಲಾಗುತ್ತದೆ.

ಈ ವರ್ಷ ಡಿಸೆಂಬರ್ 30 ರಂದು ವೈಕುಂಠ ಏಕಾದಶಿ ಆಚರಣೆಯಿದೆ. ಈ ದಿನ ವೈಕುಂಠದ ದ್ವಾರವನ್ನು ನಿರ್ಮಿಸಿ, ವೃತವನ್ನು ಆಚರಿಸುವ ಪದ್ಧತಿ ಇದೆ. ವೈಕುಂಠ ಏಕಾದಶಿ ಬೆಳಿಗ್ಗೆ ಮಂಗಳವಾರ ಬೆಳಗ್ಗೆ 7:50 ರಿಂದ ಪ್ರಾರಂಭವಾಗಿ ಡಿಸೆಂಬರ್ 31 ರ ಬೆಳಿಗ್ಗೆ 5ರ ವರೆಗೂ ಇರುತ್ತದೆ. ಈ ಅವಧಿಯಲ್ಲಿ ವ್ರತವನ್ನು ಆಚರಿಸುವುದು ಉತ್ತಮ.

ಈ ದಿನದ ಉಪವಾಸದಿಂದ ಜನನ–ಮರಣದ ಬಂಧನದಿಂದ ಮುಕ್ತಿ ಸಿಗುತ್ತದೆ ಮತ್ತು ವಿಷ್ಣುವಿನ ನಿತ್ಯ ನಿವಾಸವಾದ ವೈಕುಂಠ ಧಾಮವನ್ನು ಸೇರಬಹುದು. ದೇಹ ಮತ್ತು ಮನಸ್ಸನ್ನು ಶುದ್ಧೀಕರಿಸಿ, ಆತ್ಮಾವಲೋಕನ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೆ ಇದು ಸೂಕ್ತ ದಿನವಾಗಿದೆ. ಈ ದಿನ ವಿಷ್ಣುವಿನ ವೈಕುಂಠ ಧಾಮದ ಬಾಗಿಲುಗಳು ಭಕ್ತರಿಗೆ ತೆರೆದಿರುತ್ತವೆ ಎಂದು ನಂಬಿಕೆ, ಆದ್ದರಿಂದಲೇ ಇದನ್ನು 'ವೈಕುಂಠ ಏಕಾದಶಿ' ಎನ್ನುತ್ತಾರೆ.

ಶ್ರೀಕೃಷ್ಣನು ಅರ್ಜುನನಿಗೆ ಭಗವದ್ಗೀತೆಯಲ್ಲಿ ಈ ಮಾಸದ (ಮಾರ್ಗಶಿರ) ಮಹತ್ವವನ್ನು ಹೇಳಿದ್ದಾನೆ. ಪದ್ಮ ಪುರಾಣದ ಪ್ರಕಾರ, ಈ ದಿನ ಮುರಾ ಎಂಬ ರಾಕ್ಷಸನ ಸಂಹಾರದಿಂದ 'ಏಕಾದಶಿ ದೇವಿ' ಉದ್ಭವಿಸಿದಳು. ಅವಳನ್ನು ಪೂಜಿಸಿದವರಿಗೆ ಮೋಕ್ಷ ಕರುಣಿಸಬೇಕೆಂದು ವಿಷ್ಣುವಿಗೆ ವರ ಬೇಡಿದಳು. ವಿಷ್ಣುವಿನ ನಾಮಸ್ಮರಣೆ ಮತ್ತು ಪ್ರಾರ್ಥನೆಗಳಿಂದ ದೈವಿಕ ಸಂಪರ್ಕ ಹೆಚ್ಚಾಗುತ್ತದೆ ಎಂಬ ಪ್ರತೀತಿಯಿದೆ.

ಪುರಾಣ ಕಥೆಗಳ ಪ್ರಕಾರ 'ಒಮ್ಮೆ ವಿಷ್ಣುವು ನರಕಾಸುರ ಎಂಬ ರಾಕ್ಷಸನನ್ನು ಸಂಹಾರ ಮಾಡುತ್ತಾನೆ. ಬಳಿಕ ನಾನು ಯಾವ ದಿನದಂದು ವೈಕುಂಠದ ಬಾಗಿಲನ್ನು ತೆರೆಯುತ್ತೇನೆಯೋ ಆ ದಿನ ಭೂಮಂಡಲದಲ್ಲಿ ಉಪವಾಸ ಮಾಡುವ ಮನುಷ್ಯ ವೈಕುಂಠಕ್ಕೆ ಬರಲು ಅರ್ಹನಾಗುತ್ತಾನೆ' ಎಂಬ ಸಂದೇಶ ನೀಡಿದರು ಎಂಬ ನಂಬಿಕೆ ಇದೆ.

ಇದು ಮೋಕ್ಷದ ಸಂಕೇತ, ಇದು ಅಂತರಂಗ ಶುದ್ಧಿಯ ಕರೆ. ಪುರಾಣಗಳ ಪ್ರಕಾರ ಈ ದಿನ ಭಗವಂತನು ಭಕ್ತರಿಗೆ ಹೀಗೆ ಅನುಗ್ರಹಿಸಿದನೆಂದು ಹೇಳಲಾಗುತ್ತದೆ. "ನನ್ನನ್ನು ಶ್ರದ್ಧೆಯಿಂದ ಸ್ಮರಿಸುವವರಿಗೆ ನಾನು ಸ್ವತಃ ವೈಕುಂಠದ ದಾರಿ ತೆರೆದು ಕೊಡುತ್ತೇನೆ ಎಂಬುದು ದೈವವಾಣಿ. ಅದರಂತೆ ವೈಕುಂಠ ನಮ್ಮ ಹೃದಯದಲ್ಲಿದೆ. ಅಲ್ಲಿ ಇರುವ ದ್ವಾರವನ್ನು ತೆರೆಸುವುದು ಹೇಗೆ? ಅಹಂಕಾರವನ್ನು ಬಿಟ್ಟು, ಲೋಭವನ್ನು ಕಡಿಮೆ ಮಾಡಿ, ಕ್ರೋಧವನ್ನು ಶಮನಗೊಳಿಸಿ, ಭಕ್ತಿಯಿಂದ ನಾಮಸ್ಮರಣೆ ಮಾಡಿದಾಗ.. ಆ ಕ್ಷಣದಲ್ಲೇ ವೈಕುಂಠ ದ್ವಾರ ತೆರೆದಂತೇ.

ಆಚರಣೆ ಹೇಗೆ

ಈ ದಿನದಂದು ವಿಷ್ಣುವನ್ನು ಸ್ಮರಿಸುತ್ತಾ ಉಪವಾಸ ಮಾಡುವುದು ಪ್ರಮುಖ ಆಚರಣೆ. ಶ್ರೀಮಹಾ ವಿಷ್ಣುವಿನ ಆರಾಧನೆ, ಮಂತ್ರ ಪಠಣ, ದಾನ–ಧರ್ಮದಂತಹ ಪುಣ್ಯ ಕಾರ್ಯಗಳಲ್ಲಿ ತೊಡಗುವುದು. ಭಕ್ತಿಯಿಂದ ವಿಷ್ಣುವಿನ ನಾಮಗಳನ್ನು ಜಪಿಸುವುದು.

## ವೈಕುಂಠ ಏಕಾದಶಿ ದಿನ ಈ ಮಂತ್ರಗಳನ್ನು ಪಠಿಸಿ:

1. ಹರೇ ಕೃಷ್ಣ ಮಂತ್ರ:
"ಹರೇ ಕೃಷ್ಣ ಹರೇ ಕೃಷ್ಣ
ಕೃಷ್ಣ ಕೃಷ್ಣ ಹರೇ ಹರೇ
ಹರೇ ರಾಮ ಹರೇ ರಾಮ
ರಾಮ ರಾಮ ಹರೇ ಹರೇ"

2. ವಿಷ್ಣು ಗಾಯತ್ರಿ ಮಂತ್ರ:
" ಓಂ ಶ್ರೀ ವಿಷ್ಣವೇ ಚ ವಿದ್ಮಹೇ
ವಾಸುದೇವಾಯ ಧೀಮಹಿ
ತನ್ನೋ ವಿಷ್ಣುಃ ಪ್ರಚೋದಯಾತ್"

3. ಮಂಗಳಂ ಭಗವಾನ್ ವಿಷ್ಣು ಮಂತ್ರ:
"ಮಂಗಳಂ ಭಗವಾನ್ ವಿಷ್ಣುಃ ಮಂಗಳಂ ಗರುಡಧ್ವಜಃ
ಮಂಗಳಂ ಪುಂಡರಿಕಾಕ್ಷ ಮಂಗಳಾಯ ತನೋ ಹರಿಃ"

4. ವಾಸುದೇವ ಮಂತ್ರ:
"ಓಂ ನಮೋ ಭಗವತೇ ವಾಸುದೇವಾಯ"

5. ವಿಷ್ಣು ಮೂಲ ಮಂತ್ರ:
"ಓಂ ನಮೋಃ ನಾರಾಯಣಾಯ"

6. ವಿಷ್ಣು ಶಾಂತಾಕಾರ ಮಂತ್ರ:
"ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ
ವಿಶ್ವಾಧಾರಂ ಗಗನಸದೃಶಂ ಮೇಘವರ್ಣಂ ಶುಭಾಂಗಂ।
ಲಕ್ಷ್ಮಿಕಾಂತಂ ಕಮಲನಯನಂ ಯೋಗಿಭಿರ್ಧ್ಯಾನಗಮ್ಯಂ
ವಂದೇ ವಿಷ್ಣುಂ ಭವಭಯಹರಂ
ಸರ್ವಲೋಕೈಕನಾಥಂ"

ವೈಕುಂಠ ಏಕಾದಶಿ ವ್ರತದ ದಿನದಂದು ನೀವು ವಿಷ್ಣು ದೇವನ ಆರಾಧನೆಯನ್ನು ಮಾಡುವುದರ ಜೊತೆಗೆ ಈ ಮಂತ್ರಗಳನ್ನು ಶ್ರದ್ಧಾ, ಭಕ್ತಿಯಿಂದ ಪಠಿಸುವುದರಿಂದಲೂ ವ್ಯಕ್ತಿಯ ಇಷ್ಟಾರ್ಥಗಳು ಈಡೇರುವುದು, ಜೀವನದ ಎಲ್ಲಾ ರೀತಿಯ ತೊಂದರೆಗಳಿಂದ ನಿಮಗೆ ಮುಕ್ತಿ ದೊರೆಯುವುದು. ವೈಕುಂಠ ಏಕಾದಶಿಯ ದಿನದಂದು ನೀವು ಈ ವಿಷ್ಣು ಮಂತ್ರಗಳಲ್ಲಿ ಯಾವುದೇ ಒಂದು ವಿಷ್ಣು ಮಂತ್ರವನ್ನು ಪಠಿಸಿ.

# ಪ್ರಪಂಚದಾದ್ಯಂತ ಹೊಸ ವರ್ಷದ ಆಚರಣೆಗಳ ಇತಿಹಾಸ

ಹೊಸ ವರ್ಷದ ಮುನ್ನಾದಿನ ಎಂದರೇನು? ಪ್ರಪಂಚದ ಹೆಚ್ಚಿನ ಸ್ಥಳಗಳಲ್ಲಿ ಹೊಸ ವರ್ಷದ ಮುನ್ನಾದಿನವು ಕ್ಯಾಲೆಂಡರ್ ವರ್ಷದಲ್ಲಿ ಅತ್ಯಂತ ದೊಡ್ಡ ಸಂದರ್ಭಗಳಲ್ಲಿ ಒಂದಾಗಿದೆ, ಅಂದರೆ ಅದನ್ನು ಹೇಗೆ ಆಚರಿಸಲಾಗುತ್ತದೆ ಎಂಬುದರ ಸುತ್ತ ಒಂದು ಆಕರ್ಷಕ ಇತಿಹಾಸವಿದೆ, ಇದು ದಾಖಲಿತ ಇತಿಹಾಸದ ಆರಂಭದವರೆಗೆ ವಿಸ್ತರಿಸುತ್ತದೆ.

ಜನರು ಹೊಸ ವರ್ಷವನ್ನು ಆಚರಿಸಲು ಹಲವಾರು ಮಾರ್ಗಗಳಿವೆ, ಅದು ನಮ್ಮ ಆಧುನಿಕ ಯುಗದಲ್ಲಿ ನಗರದಲ್ಲಿ ಪಟಾಕಿ ಸಿಡಿಸಬಹುದು ಅಥವಾ ಕನಿಷ್ಠ 12 ಗಂಟೆಯವರೆಗೆ ಜನರು ಮನೆಯಲ್ಲಿಯೇ ಇರುವ ಸ್ಪೇನ್‌ನ ಸಂಪ್ರದಾಯವಾಗಿರಬಹುದು ಮತ್ತು ಮಧ್ಯರಾತ್ರಿಯ ಸಮಯದಲ್ಲಿ 12 ದ್ರಾಕ್ಷಿಯನ್ನು ತಿನ್ನುವ ಮೂಲಕ ಹೊಸ ವರ್ಷವನ್ನು ನೋಡಲು ಅವರು ಇಷ್ಟಪಡುತ್ತಾರೆ. ಹೊಸ ವರ್ಷವನ್ನು ಆಚರಿಸುವ ವಿಧಾನ ಏನೇ ಇರಲಿ, ಅದರಲ್ಲಿ ಏನಾದರೂ ವಿಭಿನ್ನವಾಗಿರುತ್ತದೆ, ಆದರೆ ಅದರ ಬಗ್ಗೆ ಏನಾದರೂ ವಿಶಿಷ್ಟವೂ ಇರುತ್ತದೆ.

ಪ್ರಾಚೀನ ಬ್ಯಾಬಿಲೋನ್

ಬ್ಯಾಬಿಲೋನಿಯನ್ನರು ಹೊಸ ವರ್ಷವನ್ನು ಯಾವುದೋ ಒಂದು ರೂಪದಲ್ಲಿ ಆಚರಿಸಿದ ಮೊದಲ ಜನರು. ಅವರು ಏನು ಮಾಡಿದರು ಎಂಬುದರ ಬಗ್ಗೆ ನಮಗೆ ಹೆಚ್ಚು ತಿಳಿದಿಲ್ಲ, ಆದರೆ ಬಹುಶಃ ಅವರು ಬ್ಯಾಬಿಲೋನ್‌ನ ಹ್ಯಾಂಗಿಂಗ್ ಗಾರ್ಡನ್ಸ್‌ನಲ್ಲಿ ದೊಡ್ಡ ಪಾರ್ಟಿ ಮಾಡಿರಬಹುದು?

ಹೊಸ ವರ್ಷದ ಆಚರಣೆಯ ಆರಂಭಿಕ ದಾಖಲೆ 4,000 ವರ್ಷಗಳ ಹಿಂದೆ ಪ್ರಾಚೀನ ಬ್ಯಾಬಿಲೋನಿಯನ್ನರಿಂದ ಬಂದಿದೆ. ಆದರೆ, ನಾವು ಆಚರಿಸುವ ಅದೇ ಸಮಯದಲ್ಲಿ ಅವರು ಹೊಸ ವರ್ಷವನ್ನು ಆಚರಿಸಲಿಲ್ಲ. ಬದಲಾಗಿ, ವಸಂತ ವಿಷುವತ್ ಸಂಕ್ರಾಂತಿಯಂದು ಹೊಸ ವರ್ಷವನ್ನು ದೊಡ್ಡ ಆಚರಣೆಯಿಂದ ಗುರುತಿಸಲಾಗುತ್ತಿತ್ತು. ನಮಗೆ ಉಳಿದವರಿಗೆ, ಹಗಲುಗಳು ರಾತ್ರಿಗಳಿಗಿಂತ ಉದ್ದವಾಗಲು ಪ್ರಾರಂಭಿಸುವ ವರ್ಷದ ಹಂತ ಅದು. ಅವರು ಉತ್ತರ ಗೋಳಾರ್ಧದಲ್ಲಿ ವಾಸಿಸುತ್ತಿದ್ದ ಕಾರಣ, ಇದು ಸಾಮಾನ್ಯವಾಗಿ ಮಾರ್ಚ್ ಅಂತ್ಯದ ಯಾವುದೋ ಒಂದು ಹಂತದಲ್ಲಿತ್ತು.

ಬ್ಯಾಬಿಲೋನಿಯನ್ನರು ಪಾರ್ಟಿ ಮಾಡುವುದು ಹೇಗೆಂದು ತಿಳಿದಿದ್ದರು. ವಾಸ್ತವವಾಗಿ, ಅವರು ಹೊಸ ವರ್ಷವನ್ನು 11 ದಿನಗಳ ಹಬ್ಬದೊಂದಿಗೆ ಆಚರಿಸಿದರು, ಇದರಲ್ಲಿ ಪ್ರತಿ ದಿನವೂ ವಿಭಿನ್ನ ಆಚರಣೆಗಳು ಇದ್ದವು. ಇದರ ಬಗ್ಗೆ ಹೆಚ್ಚು ತಿಳಿದಿಲ್ಲ, ಆದರೆ ನಮಗೆ ತಿಳಿದಿರುವುದು ಬಹಳ ರೋಮಾಂಚಕಾರಿಯಾಗಿದೆ. ಈ ಹಬ್ಬವನ್ನು ಅಕಿಟು ಎಂದು ಕರೆಯಲಾಗುತ್ತಿತ್ತು ಮತ್ತು ಇದು ದುಷ್ಟ ಸಮುದ್ರ ದೇವತೆ ಟಿಯಾಮತ್ ಮೇಲೆ ಆಕಾಶ ದೇವರು ಮರ್ದುಕ್‌ನ ವಿಜಯವನ್ನು ಆಚರಿಸಿತು .

ರೋಮನ್ನರು

ಜೂಲಿಯಸ್ ಸೀಸರ್ ಎಂಬಾತನಿಗೆ ಕೃತಜ್ಞತೆಯಿಂದ ಜನವರಿ 1 ರಂದು ಹೊಸ ವರ್ಷವನ್ನು ಆಚರಿಸಿದ ಮೊದಲ ಜನರು ರೋಮನ್ನರು.

ರೋಮನ್ನರು ಪ್ರಾಚೀನ ಇತಿಹಾಸಕ್ಕೆ ಸೇರಿದವರು ಎಂದು ನಾವು ಭಾವಿಸಬಹುದಾದರೂ, ಅವರು ಬ್ಯಾಬಿಲೋನಿಯಾದ ಆರಂಭಿಕ ಕುರುಹುಗಳ ನಂತರ ಸುಮಾರು 1,500 ವರ್ಷಗಳ ನಂತರ ಹುಟ್ಟಿಕೊಂಡರು ! ಹೇಗಾದರೂ, ಅವರು ಉತ್ತಮ ಹೊಸ ವರ್ಷದ ಪಾರ್ಟಿಯನ್ನು ಸಹ ಇಷ್ಟಪಟ್ಟರು. ಜನವರಿ 1 ರಂದು ನಾವು ಹೊಸ ವರ್ಷದ ದಿನವನ್ನು ಆಚರಿಸುವಾಗ ಅವರು ಮೊದಲು ಆಚರಿಸಿದ ಜನರು.

ಇದಕ್ಕೆ ಒಳ್ಳೆಯ ಕಾರಣವಿದೆ. ಮೂಲತಃ ರೋಮನ್ ಕ್ಯಾಲೆಂಡರ್ ಸೂರ್ಯನೊಂದಿಗೆ ಹೊಂದಿಕೆಯಾಗಿತ್ತು, ಆದರೆ ಕಾಲಾನಂತರದಲ್ಲಿ, ಅದು ಸಿಂಕ್ರೊನೈಸ್ ಆಗಲಿಲ್ಲ. ಆದ್ದರಿಂದ, ಅದನ್ನು ಮತ್ತೆ ವೇಗಗೊಳಿಸಲು, ಸೀಸರ್ 90 ದಿನಗಳನ್ನು ಸೇರಿಸಿದರು! ಇದು ಸರಿಸುಮಾರು ಎರಡು ಹೆಚ್ಚುವರಿ ತಿಂಗಳುಗಳಿಗೆ ಸಮಾನವಾಗಿದೆ.

ಇದರ ಭಾಗವಾಗಿ, ಪ್ರತಿ ವರ್ಷವು ಹೊಸ ಆರಂಭದ ದೇವರಾದ ಜಾನಸ್‌ನ ಆರಂಭದಲ್ಲಿ ಪ್ರಾರಂಭವಾಗಬೇಕೆಂದು ನಿರ್ಧರಿಸಲಾಯಿತು.

ಮಧ್ಯಯುಗಗಳು

ಮಧ್ಯಯುಗದಲ್ಲಿ ಹೊಸ ವರ್ಷದ ಆರಂಭ ಮತ್ತೆ ಬದಲಾಯಿತು, ಆದರೆ ಅದು ಹೆಚ್ಚು ಕಾಲ ಹೀಗೆ ಉಳಿಯಲಿಲ್ಲ.

ಕ್ರಿಶ್ಚಿಯನ್, ಮಧ್ಯಕಾಲೀನ ಯುರೋಪ್‌ನಲ್ಲಿ, ರೋಮನ್ ಹಬ್ಬದ ದಿನದಂದು ಹೊಸ ವರ್ಷವನ್ನು ಆಚರಿಸುವ ಕಲ್ಪನೆಯನ್ನು ಚರ್ಚ್ ನಾಯಕರು ಇಷ್ಟಪಡಲಿಲ್ಲ, ಆದ್ದರಿಂದ ಅವರು ದಿನಾಂಕಗಳೊಂದಿಗೆ ಸ್ವಲ್ಪ ಆಟವಾಡಿದರು. ಮೊದಲಿಗೆ, ಅವರು ವರ್ಷದ ಆರಂಭವನ್ನು ಡಿಸೆಂಬರ್ 25 ಕ್ಕೆ ಬದಲಾಯಿಸಿದರು, ಮತ್ತು ನಂತರ, ಕ್ರಿಸ್‌ಮಸ್ ಅನ್ನು ಏಕಾಂಗಿಯಾಗಿ ಬಿಡುವುದು ಉತ್ತಮ ಎಂದು ನಿರ್ಧರಿಸಿ ಮಾರ್ಚ್ 25 ಕ್ಕೆ ಬದಲಾಯಿಸಿದರು. ಅಂತಿಮವಾಗಿ, ಪೋಪ್ ಗ್ರೆಗೊರಿ ಥಿಖಖಖ ಹೊಸ ವರ್ಷವನ್ನು ಆಚರಿಸುವ ಹಳೆಯ



ವಿಧಾನದಲ್ಲಿ ಯಾವುದೇ ತಪ್ಪಿಲ್ಲ ಎಂದು ಅರಿತುಕೊಂಡರು, ಆದ್ದರಿಂದ ಅವರು ದಿನಾಂಕವನ್ನು 1582 ರಲ್ಲಿ ಜನವರಿ 1 ಕ್ಕೆ ಬದಲಾಯಿಸಿದರು. ಮತ್ತು ಇಲ್ಲಿ ನಿಮಗೆ ತಿಳಿದಿದೆ, ಪ್ರಪಂಚದಾದ್ಯಂತ ಹೊಸ ವರ್ಷದ ಆಚರಣೆಗಳ ಸಂಕ್ಷಿಪ್ತ ಇತಿಹಾಸ! 21 ನೇ ಶತಮಾನದಲ್ಲಿ ದೊಡ್ಡ ದಿನವನ್ನು ಹೇಗೆ ಆಚರಿಸಲಾಗುತ್ತದೆ ಎಂಬುದರ ಕುರಿತು ನೀವು ಇನ್ನಷ್ಟು ತಿಳಿದುಕೊಳ್ಳಲು ಬಯಸಿದರೆ, ನೀವು ಓದುವುದನ್ನು ಮುಂದುವರಿಸಬಹುದು...

ಇಂದು ವಿಶ್ವದಾದ್ಯಂತ ಹೊಸ ವರ್ಷದ ಆಚರಣೆಗಳು

ಸ್ಪೇನ್ ಮತ್ತು ಇತರ ಕೆಲವು ಸ್ಪ್ಯಾನಿಷ್ ಮಾತನಾಡುವ ದೇಶಗಳಲ್ಲಿ, ಹೊಸ ವರ್ಷದ ಮುನ್ನಾದಿನವನ್ನು ನೋಚೆ ವೀಜಾ ಎಂದು ಕರೆಯಲಾಗುತ್ತದೆ . ಜನರು ಕನಿಷ್ಠ 12 ಗಂಟೆಯವರೆಗೆ ಮನೆಯಲ್ಲಿಯೇ ಇರುವುದು ಸಾಂಪ್ರದಾಯಿಕವಾಗಿದೆ, ಮತ್ತು ಮಧ್ಯರಾತ್ರಿಯ ಹೊಡೆತಕ್ಕೆ 12 ದ್ರಾಕ್ಷಿಯನ್ನು ತಿನ್ನುವ ಮೂಲಕ ಹೊಸ ವರ್ಷವನ್ನು ನೋಡಲು ಅವರು ಇಷ್ಟಪಡುತ್ತಾರೆ. ಇದು ಮುಂಬರುವ ವರ್ಷದ ಅವರ ಭರವಸೆಗಳು ಮತ್ತು ಕನಸುಗಳನ್ನು ಸಂಕೇತಿಸುತ್ತದೆ. ಇದು ತುಂಬಾ ರುಚಿಕರವಾಗಿಯೂ ಧ್ವನಿಸುತ್ತದೆ ದೇಶಾದ್ಯಂತ ಅನೇಕ ಪಟ್ಟಣಗಳಲ್ಲಿ ದೊಡ್ಡ ಪಾರ್ಟಿಗಳಿವೆ, ಆದರೆ ಅತ್ಯಂತ ಪ್ರಸಿದ್ಧವಾದದ್ದು ಮ್ಯಾಡ್ರಿಡ್‌ನಲ್ಲಿ, ಪ್ಯುರ್ಟಾ ಡೆಲ್ ಸೋಲ್‌ನಲ್ಲಿ .

ಇಟಲಿ

ಇಟಲಿಯಲ್ಲಿ, ಹೊಸ ವರ್ಷದ ಮುನ್ನಾದಿನವನ್ನು ಲಾ ಫೆಸ್ಟಾ ಡಿ ಸ್ಯಾನ್ ಸಿಲ್ವೆಸ್ಟ್ರೆ ಅವರ ಹಬ್ಬದ ದಿನ ಎಂದು ಕರೆಯಲಾಗುತ್ತದೆ. ಪ್ರಪಂಚದಾದ್ಯಂತದ ಅನೇಕ ದೇಶಗಳಂತೆ, ಕುಟುಂಬಗಳು ಊಟಕ್ಕಾಗಿ ಒಟ್ಟುಗೂಡುತ್ತಾರೆ, ಇದು ಸಾಮಾನ್ಯವಾಗಿ ಹಂದಿಮಾಂಸ ಮತ್ತು ಬೇಳೆಗಳನ್ನು ಒಳಗೊಂಡಿರುತ್ತದೆ. ಊಟದ ನಂತರ, ದೊಡ್ಡ ಹಳೆಯ ಪಾರ್ಟಿಗಾಗಿ ಬೀದಿಗಳಿಗೆ ಹೋಗುವ ಸಮಯ. ನೀವು ರೋಮ್, ಮಿಲನ್ ಅಥವಾ ನೇಪಲ್ಸ್‌ನಂತಹ ದೊಡ್ಡ ನಗರದಲ್ಲಿ ನಿಮ್ಮನ್ನು ಕಂಡುಕೊಳ್ಳುವ ಅದೃಷ್ಟವಂತರಾಗಿದ್ದರೆ, ನೀವು ದೊಡ್ಡ ಪಟಾಕಿ ಪ್ರದರ್ಶನವನ್ನು ನೋಡುವ ನಿರೀಕ್ಷೆಯಿದೆ.

ಓಹ್, ಮತ್ತು ಕೆಂಪು ಒಳ ಉಡುಪು ಧರಿಸಲು ಮರೆಯಬೇಡಿ! ಇಟಲಿಯ ಕೆಲವು ಜನರು ಹೊಸ ವರ್ಷದ ಮುನ್ನಾದಿನದಂದು ಕೆಂಪು ಒಳ ಉಡುಪು ಧರಿಸುವುದರಿಂದ ನಿಮಗೆ ಅದೃಷ್ಟ ಬರುತ್ತದೆ ಎಂದು ನಂಬುತ್ತಾರೆ. ಡಿಸೆಂಬರ್ ಮಾರುಕಟ್ಟೆಗಳಲ್ಲಿ ನೀವು ಬಹಳಷ್ಟು ಮಾರಾಟಕ್ಕೆ ನೋಡುತ್ತೀರಿ!

ಯುನೈಟೆಡ್ ಸ್ಟೇಟ್ಸ್

ಟೈಮ್ಸ್ ಸ್ಕ್ವೇರ್ ಬಹುಶಃ ವಿಶ್ವದ ಅತ್ಯಂತ ಪ್ರಸಿದ್ಧ ಹೊಸ ವರ್ಷದ ಮುನ್ನಾದಿನದ ಪಾರ್ಟಿಗೆ ನೆಲೆಯಾಗಿದೆ.

ಅಮೆರಿಕದಲ್ಲಿ, ಹೊಸ ವರ್ಷದ ಮುನ್ನಾದಿನವನ್ನು ಆಸ್ಟ್ರೇಲಿಯಾದಂತೆಯೇ ಆಚರಿಸಲಾಗುತ್ತದೆ. ಅಂದರೆ, ಕುಟುಂಬಗಳು ವಿಶೇಷ ಭೋಜನಕ್ಕಾಗಿ ಒಟ್ಟಿಗೆ ಸೇರುತ್ತವೆ ಮತ್ತು ಅಲ್ಲಿ ಪಟಾಕಿಗಳ ರಾಶಿಯೇ ಇರುತ್ತದೆ. ನ್ಯೂಯಾರ್ಕ್ ವಿಶ್ವದ ಅತ್ಯಂತ ಪ್ರಸಿದ್ಧ ಹೊಸ ವರ್ಷದ ಆಚರಣೆಗೆ ನೆಲೆಯಾಗಿದೆ. ಪ್ರತಿ ವರ್ಷ, ಸಾವಿರಾರು ಪಾರ್ಟಿ–ವೀಕ್ಷಕರು ಮ್ಯಾನ್‌ಹ್ಯಾಟನ್‌ನಲ್ಲಿ ಪ್ರಸಿದ್ಧ ಟೈಮ್ಸ್ ಸ್ಕ್ವೇರ್ ಬಾಲ್ (ಮೇಲೆ ಚಿತ್ರಿಸಲಾಗಿದೆ) ಮಧ್ಯರಾತ್ರಿಯ ಹೊಡೆತದಲ್ಲಿ ಕೆಳಗಿಳಿಸುವುದನ್ನು ನೋಡಲು ಸೇರುತ್ತಾರೆ. ಚೆಂಡನ್ನು ಸ್ವತಃ ವಾಟರ್‌ಫೋರ್ಡ್ ಕ್ರಿಸ್ಟಲ್‌ನಿಂದ ತಯಾರಿಸಲಾಗಿದೆ, ಇದು ಒಂದು ರೀತಿಯ ಮಾದರಿಯ ಗಾಜಿನಂತಿದೆ, ಆದ್ದರಿಂದ ಯಾರೂ ಅದನ್ನು ಎಂದಿಗೂ ಬೀಳಿಸಬಾರದು ಎಂದು ನಾವು ಭಾವಿಸೋಣ!

ಚೀನಾ

ಚೀನಾ ಮತ್ತು ಆಗ್ನೇಯ ಏಷ್ಯಾದ ಇತರ ಕೆಲವು ದೇಶಗಳಲ್ಲಿ, ಹೊಸ ವರ್ಷವನ್ನು ಚಂದ್ರನ ಕ್ಯಾಲೆಂಡರ್‌ನ ಆರಂಭದಲ್ಲಿ ಆಚರಿಸಲಾಗುತ್ತದೆ, ಇದು 2022 ರಲ್ಲಿ ಫೆಬ್ರವರಿ 1 ರಂದು ಬರುತ್ತದೆ. ಈ ಹಬ್ಬವು ಎರಡು ವಾರಗಳಿಗಿಂತ ಹೆಚ್ಚು ಕಾಲ ನಡೆಯುತ್ತದೆ, ಸಾಂಪ್ರದಾಯಿಕ ಲ್ಯಾಂಟರ್ನ್ ಉತ್ಸವದೊಂದಿಗೆ ಕೊನೆಗೊಳ್ಳುತ್ತದೆ. ಪ್ರಪಂಚದಾದ್ಯಂತದ ಅನೇಕ ದೇಶಗಳಲ್ಲಿ ದೊಡ್ಡ ಚೀನೀ ಮತ್ತು ಏಷ್ಯನ್ ಸಮುದಾಯಗಳು ಇರುವುದರಿಂದ, ಹೆಚ್ಚಿನ ನಗರಗಳು ಕೆಲವು ರೀತಿಯ ಚೀನೀ ಹೊಸ ವರ್ಷದ ಆಚರಣೆಯನ್ನು ಹೊಂದಿರುತ್ತವೆ, ಆದ್ದರಿಂದ ನೀವು ಮೋಜಿನಲ್ಲಿ ತಪ್ಪಿಸಿಕೊಳ್ಳುವ ಬಗ್ಗೆ ಚಿಂತಿಸಬೇಕಾಗಿಲ್ಲ.

ಆಸ್ಟ್ರೇಲಿಯಾ

ಆಸ್ಟ್ರೇಲಿಯಾ ಪೂರ್ವ ಗೋಳಾರ್ಧದ ದೂರದ ಪ್ರದೇಶಗಳಲ್ಲಿರುವುದರಿಂದ, ಹೊಸ ವರ್ಷವನ್ನು ಅನುಭವಿಸುವ ವಿಶ್ವದ ಮೊದಲ ಸ್ಥಳಗಳಲ್ಲಿ ನಾವೂ ಒಂದು. ವಾಸ್ತವವಾಗಿ, ಯುಕೆ ನಂತಹ ಪ್ರಪಂಚದಾದ್ಯಂತದ ಇತರ ದೇಶಗಳ ಜನರು ಸಿಡ್ನಿ ಹಾರ್ಬರ್ ಸೇತುವೆಯಲ್ಲಿ ಜನರು ಮೋಜು ಮಾಡುತ್ತಿರುವ ಚಿತ್ರಗಳನ್ನು ನೋಡಿ ಎಚ್ಚರಗೊಳ್ಳುತ್ತಾರೆ. ಪ್ರತಿ ವರ್ಷ, ಪಾರ್ಟಿಗೆ ಒಂದು ಥೀಮ್ ಇದೆ. ಹಿಂದಿನ ವರ್ಷಗಳಲ್ಲಿ, ಇದು "ನಾವು ಒಂದು" ಮತ್ತು "ಏಕತೆ" ಆಗಿತ್ತು, ಆದರೆ 2022 ರ ಕಾರ್ಯಕ್ರಮದ ಥೀಮ್ ಇನ್ನೂ ನಿರ್ಧರಿಸಲಾಗಿಲ್ಲ.

ಹೊಸ ವರ್ಷ ಆಚರಣೆಯ ಹಿಂದಿನ ಇತಿಹಾಸ

ಕ್ರಿಸ್ತ ಪೂರ್ವ 45 ರ ಕಾಲಘಟ್ಟದಲ್ಲಿ ಜನವರಿ 1ರಂದು ಹೊಸ ವರ್ಷ ಆಚರಣೆ ಎಂದು ಪರಿಗಣಿಸಲ್ಪಟ್ಟಿತು. ಈ ಆಚರಣೆಗೂ ಮುನ್ನ ರೋಮನ್ ಕ್ಯಾಲೆಂಡರ್‌ನ ಹೊಸವರ್ಷ ಮಾರ್ಚ್ ತಿಂಗಳಲ್ಲಿ ಶುರುವಾಗುತ್ತಿತ್ತು. ಈ ಕ್ಯಾಲೆಂಡರ್ ಪ್ರಕಾರ ವರ್ಷಕ್ಕೆ 355 ದಿನಗಳಿದ್ದವು. ರೋಮನ್ ಸರ್ವಾಧಿಕಾರಿ ಜ್ಯೂಲಿಯಸ್ ಸೀಸರ್ ಅಧಿಕಾರಕ್ಕೆ ಬಂದ ಬಳಿಕ ಕ್ಯಾಲೆಂಡರ್‌ನಲ್ಲಿ ಸುಧಾರಣೆ ತಂದನು. ಜನವರಿ 1 ರ ಪರಿಕಲ್ಪನೆಯನ್ನು ಜ್ಯೂಲಿಯಸ್ ಸೀಸರ್ ಹುಟ್ಟಿ ಹಾಕಿದನು. ಹೀಗಾಗಿ ರೋಮನ್ ದೇವತೆ ಜಾನುಸ್‌ನ ಗೌರವಾರ್ಥ ಮೊದಲ ತಿಂಗಳಿಗೆ ಜನವರಿ ಎಂದು ಹೆಸರಿಡಲಾಗಿದೆ. ಆದರೆ, ಯುರೋಪ್ ಸೇರಿದಂತೆ ಬಹುತೇಕ ಪ್ರದೇಶಗಳಲ್ಲಿ ಕ್ರಿ.ಶ. 16ನೇ ಶತಮಾನದ ಮಧ್ಯಭಾಗದ ತನಕವೂ ಜ್ಯೂಲಿಯಸ್ ಸೀಸರ್‌ನ ಈ ಪರಿಕಲ್ಪನೆಯ ಕ್ಯಾಲೆಂಡರನ್ನು ಒಪ್ಪಿಕೊಂಡಿರಲಿಲ್ಲ.

ಕ್ರಿಶ್ಚಿಯನ್ ಧರ್ಮ ವ್ಯಾಪಕವಾಗಿ ಹರಡಿಕೊಳ್ಳುತ್ತಿದ್ದಂತೆ ಹೊಸ ವರ್ಷದ ಆರಂಭವಾಗಿ ಜನವರಿ 1 ಕ್ಕೆ ಪೇಗನ್ ಎಂದೂ ಡಿಸೆಂಬರ್ 25 ಅನ್ನು ಯೇಸುವಿನ ಜನನ ದಿನ ಎಂದೂ ಪರಿಗಣಿಸಲ್ಪಟ್ಟಿತು. ಪೋಪ್ ಗ್ರೆಗೊರಿ ಜ್ಯೂಲಿಯನ್ ಕ್ಯಾಲೆಂಡರನ್ನು ಸುಧಾರಿಸಿದ ನಂತರ ಜನವರಿ 1 ಅನ್ನು ಹೊಸ ವರ್ಷದ ಮೊದಲ ದಿನ ಎಂದು ಸ್ವೀಕರಿಸಲಾಯಿತು. ಆದರೆ ಈ ಹೊಸ ವರ್ಷ ಆಚರಣೆಯು ಪ್ರಾಚೀನ ಬ್ಯಾಬಿಲೋನ್‌ನಲ್ಲಿ ಕ್ರಿ.ಪೂ. 2,000 ರಲ್ಲಿಯೇ ಹುಟ್ಟಿಕೊಂಡಿತ್ತು. ಈ ಬ್ಯಾಬಿಲೋನಿಯನ್ನರು ಹೊಸ ವರ್ಷವನ್ನು ಅಕಿಟು ಎಂಬ ಹನ್ನೊಂದು ದಿನಗಳ ಆಚರಣೆಯನ್ನಾಗಿ ನಡೆಸುತ್ತಿದ್ದರು. ಹೀಗಾಗಿ ಪ್ರಪಂಚದ ಬಹುತೇಕ ದೇಶಗಳು ಜನವರಿ 1ರಂದು ಹೊಸ ವರ್ಷ ಆಚರಿಸುತ್ತಾರೆ.

ಹೊಸ ವರ್ಷದ ಮಹತ್ವ ಹಾಗೂ ಆಚರಣೆ

ಜನವರಿ 1 ರಂದು ಹೊಸ ಕ್ಯಾಲೆಂಡರ್ ವರ್ಷವನ್ನು ಸ್ವಾಗತಿಸುವ ದಿನವಾಗಿದ್ದು , ಈ ಹಿನ್ನಲೆಯಲ್ಲಿ ಪ್ರಪಂಚದ ಕೆಲವು ದೇಶಗಳಲ್ಲಿ ಹೊಸ ವರ್ಷದ ಆಚರಣೆಯು ಮಹತ್ವದ್ದಾಗಿದೆ. ಅನೇಕ ದೇಶಗಳಲ್ಲಿ ಹೊಸ ವರ್ಷದ ಆಚರಣೆಗಳು ಡಿಸೆಂಬರ್ 31ರಂದೇ ಪ್ರಾರಂಭವಾಗುತ್ತವೆ. ಈ ಡಿಸೆಂಬರ್ 31 ರ ರಾತ್ರಿಯಿಂದಲೇ ಆರಂಭವಾಗುವ ಈ ಆಚರಣೆ ಜನವರಿ 1ರ ನಸುಕಿನ ತನಕ ಇರುತ್ತದೆ. ಈ ವೇಳೆಯಲ್ಲಿ ಪಟಾಕಿ ಸಿಡಿಸುವುದು, ಪಾರ್ಟಿ ಮಾಡುತ್ತಾರೆ. ಕೆಲವರಂತೂ ಹೊಸ ವರ್ಷದ ಆರಂಭದೊಂದಿಗೆ ಜೀವನ ಕ್ರಮದಲ್ಲಿ ಬದಲಾವಣೆ ಮಾಡಿಕೊಳ್ಳುತ್ತಾರೆ. ಉತ್ತಮ ನಿರ್ಣಯಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ.




# 28 ವರ್ಷದ ಬಳಿಕ ಗಾಂಧಿ ಕುಟುಂಬದಲ್ಲಿ ಮದುವೆ ಸಂಭ್ರಮ;





ಗಾಂಧಿ ಕುಟುಂಬದಲ್ಲಿ ಮದುವೆ ಸಂಭ್ರಮ ಶುರುವಾಗಿದೆ. ಹೌದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ, ಉದ್ಯಮಿ ರಾಬರ್ಟ್ ವಾದ್ರಾ ಪುತ್ರ ರೈಹಾನ್ ವಾದ್ರಾ ತಮ್ಮ ಬಹುಕಾಲದ ಗೆಳತಿ ಅವಿವ ಬೇಗ್ ಜೊತೆ ನಿಶ್ಚಿತಾರ್ಥ ಮಾಡಿಕೊಂಡಿದ್ದಾರೆ ಎನ್ನಲಾಗುತ್ತಿದೆ.

ಏಳು ವರ್ಷದ ಲವ್

ರೈಹಾನ್ ವಾದ್ರಾ ಅವರಿಗೆ 25 ವರ್ಷ. ಈಗ ಅವರು ಮದುವೆ ಆಗುತ್ತಿದ್ದಾರೆ. ಕಳೆದ ಏಳು ವರ್ಷಗಳ ಹಿಂದೆ ಈ ಜೋಡಿ ಪ್ರೀತಿ ಮಾಡುತ್ತಿದ್ದರು. ಅಂದರೆ 18ನೇ ವಯಸ್ಸಿಗೆ ಲವ್‌ನಲ್ಲಿ ಬಿದ್ದಿದ್ದರು. ಅವಿವ ಬೇಗ್ ಜೊತೆ ಇತ್ತೀಚೆಗೆ ಮದುವೆಯಾಗುವ ಪ್ರಸ್ತಾವನೆ ಇಟ್ಟಿದ್ದರು. ಈ ಮದುವೆಗೆ ಎರಡೂ ಕುಟುಂಬಸ್ಥರು ಕೂಡ ಒಪ್ಪಿಗೆ ಸೂಚಿಸಿದ್ದಾರೆ.

28 ವರ್ಷದ ಬಳಿಕ ಮದುವೆ

ಪ್ರಿಯಾಂಕಾ ಗಾಂಧಿ, ರಾಬರ್ಡ್ ವಾದ್ರಾ ಮದುವೆಯಾಗಿ 28 ವರ್ಷಗಳು ಕಳೆದಿವೆ. ಅಂದಹಾಗೆ ರಾಹುಲ್ ಗಾಂಧಿ ಅವರು 55 ವರ್ಷವಾದರೂ ಮದುವೆ ಆಗಿಲ್ಲ. ಈಗ ಇವರ ಅಳಿಯ ರೈಹಾನ್ ಮದುವೆ ಆಗುತ್ತಿದ್ದಾರೆ. ಅಂದಹಾಗೆ ರೈಹಾನ್–ಅವಿವ ಅವರ ಪ್ರೀತಿಯನ್ನು ಎರಡೂ ಕುಟುಂಬಗಳು ಒಪ್ಪಿವೆ. ಅವಿವ ಬೇಗ್ ಮತ್ತು ಅವರ ಕುಟುಂಬ ದೆಹಲಿಯಲ್ಲಿ ನೆಲೆಸಿದೆ, ಈಗಾಗಲೇ ಎರಡೂ ಕುಟುಂಬಗಳ ನಡುವೆ ಒಳ್ಳೆಯ ಬಾಂಧವ್ಯವಿದೆ ಎನ್ನಲಾಗಿದೆ.

ಯಾರು ಈ ರೈಹಾನ್ ವಾದ್ರಾ?

ರೈಹಾನ್ ವಾದ್ರಾ ಒಬ್ಬ ವಿಷ್ಯುವಲ್ ಆರ್ಟಿಸ್ಟ್ (ದೃಶ್ಯ ಕಲಾವಿದ). ಹತ್ತು ವರ್ಷ ಇದ್ದಾಗಲೇ ಅವರಿಗೆ ಕ್ಯಾಮರಾ ಮೇಲೆ ಆಸಕ್ತಿ ಇತ್ತು. ಕ್ಯಾಮರಾದಲ್ಲಿ ಅವರು ಫೋಟೋಗಳನ್ನು ಸೆರೆ ಹಿಡಿಯುತ್ತಿದ್ದರು. ಮುಂಬೈನ ಕೊಲಾಬಾದಲ್ಲಿರುವ 'ಎಪಿಆರ್ಟ್ ಹೌಸ್' (ಂಕಖಇ ಂಡಿಣ ಊಂಣಜ) ಎಂಬ ಕಲಾ ಗ್ಯಾಲರಿಯಲ್ಲಿ ರೈಹಾನ್ ಅವರ ಪೋರ್ಟ್‌ಫೋಲಿಯೊ ವನ್ಯಜೀವಿ, ಬೀದಿ, ವಾಣಿಜ್ಯ ಫೋಟೋಗಳಿವೆ.

ಕಣ್ಣಿಗೆ ಗಾಯ ಆಗಿತ್ತು

2021 ರಲ್ಲಿ ನವದೆಹಲಿಯ ಬಿಕಾನೇರ್ ಹೌಸ್‌ನಲ್ಲಿ 'ಡಾರ್ಕ್ ಪರ್ಸೆಪ್ಶನ್' ಹೆಸರಿನ ಏಕವ್ಯಕ್ತಿ ಪ್ರದರ್ಶನವನ್ನು ನೀಡಿದ್ದರು. ಇದು 'ಕಾಲ್ಪನಿಕ ಸ್ವಾತಂತ್ರ್ಯ'ದ ವಿಷಯವನ್ನು ಒಳಗೊಂಡಿತ್ತು. 2017 ರಲ್ಲಿ ಶಾಲಾ ಕ್ರಿಕೆಟ್ ಪಂದ್ಯದಲ್ಲಿ ಅವರ ಕಣ್ಣಿಗೆ ಗಾಯವಾಗಿತ್ತು. ಆಮೇಲೆ ಅನುಭವಿಸಿದ ನೋವನ್ನು ಅವರು ದೃಶ್ಯದ ಮೂಲಕ ಪ್ರದರ್ಶನ ಮಾಡಿದ್ದರು.

ರೈಹಾನ್ ಏನು ಹೇಳಿದರು?

“ನನ್ನ ಕಣ್ಣಿಗೆ ಗಾಯ ಆದ್ಮೇಲೆ ನಾನು ಕಪ್ಪು, ಬಿಳಿಪು ಫೋಟೋಗಳನ್ನು ತೆಗೆಯಲು ಶುರು ಮಾಡಿದೆ. ಒಂದು ವಿಷಯವನ್ನು ಒಬ್ಬರು ಹೇಗೆ ಗ್ರಹಿಸುತ್ತಾರೆ? ಬೆಳಕನ್ನು ಹೇಗೆ ಹುಡುಕುತ್ತಾರೆ? ಕತ್ತಲೆಯನ್ನು ಹೇಗೆ ಬಳಸಿಕೊಳ್ತಾರೆ ಎನ್ನೋದನ್ನು ಇವರ ದೃಶ್ಯ ಪ್ರದರ್ಶನ ತಿಳಿಸುವುದು” ಎಂದಿದ್ದರು.

ತಾತನಿಗೂ ಫೋಟೋಗ್ರಫಿ ಇಷ್ಟ

ತಾಯಿ ಪ್ರಿಯಾಂಕಾ ಗಾಂಧಿ ವಾದ್ರಾ ಕೂಡ ಪ್ರೋತ್ಸಾಹ ಕೊಟ್ಟಿದ್ದಕ್ಕೆ ರೈಹಾನ್ ಅವರು ಫೋಟೋಗಳತ್ತ ಹೆಚ್ಚಿನ ಆಸಕ್ತಿ ಹೊಂದಿದ್ದರು. ರೈಹಾನ್ ಅಜ್ಜ, ಮಾಜಿ ಪ್ರಧಾನಿ ರಾಜೀವ್ ಗಾಂಧಿ ಕೂಡ ಫೋಟೋಗಳನ್ನು ತುಂಬ ಇಷ್ಟಪಡುತ್ತಿದ್ದರು. ರೈಹಾನ್ ಕೂಡ ತಾತನ ಫೋಟೋಗ್ರಫಿ ಕೆಲಸಗಳನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ.

ರೈಹಾನ್ ಭಾವಿ ಪತ್ನಿ ಅವಿವ ಬೇಗ್ ಕೂಡ ಫೋಟೋಗ್ರಾಫರ್, ಪ್ರೊಡ್ಯೂಸರ್ ಅಂತೆ.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

# ಚಳಿಯಲ್ಲಿ ಚರ್ಮದ ರಕ್ಷಣೆ ಮಾಡಿಕೊಳ್ಳುವುದು ಹೇಗೆ..?




ಚಳಿಗಾಲದ ತಂಪಿನ ಹೊಡೆತದೊಂದಿಗೆ ಚರ್ಮ ಒಣಗುವುದು, ಚರ್ಮ ತೆಳೆದಂತೆ ಕಾಣುವುದು, ತುಟಿಗಳು ಬಿರುಕು ಬಿಡುವುದು ಸಾಮಾನ್ಯ. ಇಂತಹ ಸಂದರ್ಭದಲ್ಲಿ ಸರಿಯಾದ ಚರ್ಮದ ಆರೈಕೆ ಅತ್ಯಂತ ಅಗತ್ಯ ಎಂದು ಚರ್ಮರೋಗ ತಜ್ಞರು ತಿಳಿಸುತ್ತಿದ್ದಾರೆ.

ಚಳಿಗಾಲದಲ್ಲಿ ಗಾಳಿ ಒಣವಾಗಿರುವುದರಿಂದ ಚರ್ಮದಲ್ಲಿನ ತೇವಾಂಶ ಬೇಗನೆ ಕಳೆದು ಹೋಗುತ್ತದೆ. ಇದರಿಂದ ರಸಭರಿತ ಹೊಳಪು ಕುಂದಿ, ಖಜ್ಜಳಿ, ಬಿರುಕು, ಕೆಂಪುತನ ಹೆಚ್ಚಾಗುತ್ತದೆ. ಆದ್ದರಿಂದ ದಿನನಿತ್ಯದ ಜೀವನಶೈಲಿಯಲ್ಲಿ ಕೆಲವು ಸರಳ ಬದಲಾವಣೆಗಳ ಮೂಲಕ ಚರ್ಮವನ್ನು ಆರೋಗ್ಯಕರವಾಗಿರಿಸಬಹುದು.

ತಜ್ಞರಿಂದ ಚರ್ಮ ರಕ್ಷಣೆ ಸಲಹೆಗಳು:

ತೇವಾಂಶ ಕಾಪಾಡಿಕೊಳ್ಳಿ: ದಿನಕ್ಕೆ ಕನಿಷ್ಠ 23 ಬಾರಿ ಉತ್ತಮ ಗುಣಮಟ್ಟದ ಮೊಯಿಸ್ಚರೈಸರ್ ಹಚ್ಚುವುದು ಮುಖ್ಯ. ಸ್ನಾನದ ನಂತರ ತಕ್ಷಣ ಚರ್ಮ ಒಣಗುವ ಮೊದಲೆ ಹಚ್ಚಿದರೆ ತೇವಾಂಶ ಹೆಚ್ಚು ಉಳಿಯುತ್ತದೆ.

ಬಿಸಿ ನೀರಿನ ಸ್ನಾನ ತಪ್ಪಿಸಿ: ತುಂಬಾ ಬಿಸಿ ನೀರಿನಿಂದ ಸ್ನಾನ ಮಾಡಿದರೆ ಚರ್ಮದ ನೈಸರ್ಗಿಕ ಎಣ್ಣೆ ಕರಗುತ್ತದೆ. ಹೀಗಾಗಿ ತುಸು ಸೆಕೆಯಿಂದ ಸ್ನಾನ ಮಾಡುವುದನ್ನು ತಜ್ಞರು ಶಿಫಾರಸು ಮಾಡುತ್ತಾರೆ.

ತುಟಿಗಳ ಆರೈಕೆ: ತುಟಿಗಳಿಗೆ ಬ್ಯಾಲ್ಮ್ ಅಥವಾ ಗ್ಲಿಸರಿನ್ ಬಳಸಿ. ತುಟಿಗಳನ್ನು ನಾಲಿಗೆಯಿಂದ ನಕ್ಕುವುದನ್ನು ತಪ್ಪಿಸಬೇಕು, ಇದು ಬಿರುಕು ಹೆಚ್ಚಿಸುತ್ತದೆ.

ಸನ್‌ಸ್ಕ್ರೀನ್ ಅಗತ್ಯವಷ್ಟೇ: ಚಳಿಗಾಲದಲ್ಲಿಯೂ ಸೂರ್ಯರಶ್ಮಿಯ ತೀವ್ರತೆ ಕಡಿಮೆಯಾಗಿದ್ದರೂ ಗಗಿ ಕಿರಣಗಳು ಚರ್ಮಕ್ಕೆ ಹಾನಿಯೇ. ಹೊರಗೆ ಹೋಗುವಾಗ ಕನಿಷ್ಠ ಖಕಈ 30 ಸನ್‌ಸ್ಕ್ರೀನ್ ಬಳಸುವುದು ಅನಿವಾರ್ಯ.

ಏರ್ ಹ್ಯೂಮಿಡಿಫೈಯರ್ ಬಳಕೆ: ಮನೆಯಲ್ಲಿ ಅತ್ಯಂತ ಒಣ ಗಾಳಿ ಇದ್ದರೆ ಹ್ಯೂಮಿಡಿಫೈಯರ್ ಬಳಕೆ ಚರ್ಮ ಒಣಗುವುದನ್ನು ತಪ್ಪಿಸುತ್ತದೆ.

ಸಾಕಷ್ಟು ನೀರು ಕುಡಿಯಿರಿ: ಚಳಿಗಾಲದಲ್ಲಿ ನೀರಿಗೆ ಬೇಡಿಕೆ ಕಡಿಮೆ ಇದ್ದರೂ, ದಿನಕ್ಕೆ 22.5 ಲೀಟರ್ ನೀರು ಕುಡಿಯುವುದರಿಂದ ಚರ್ಮ ಸ್ವಾಭಾವಿಕ ತೇವಾಂಶ ಕಳೆದುಕೊಳ್ಳುವುದಿಲ್ಲ.

ಎಣ್ಣೆ ಮಸಾಜ್: ತೆಂಗಿನ ಎಣ್ಣೆ, ಬದಾಮ ಎಣ್ಣೆ ಅಥವಾ ಓಲಿವ್ ಎಣ್ಣೆಯಿಂದ ತಣ್ಣನೆಯ ಹವಾಮಾನದಲ್ಲಿ ಮಸಾಜ್ ಮಾಡಿದರೆ ರಕ್ತಸಂಚಾರ ಹೆಚ್ಚಾಗಿ ಚರ್ಮ ಮೃದುವಾಗುತ್ತದೆ.

ಚಳಿಗಾಲದಲ್ಲಿ ಸರಳ ಆರೈಕೆಯೊಂದಿಗೆ ಚರ್ಮವನ್ನು ಆರೋಗ್ಯಕರವಾಗಿ ಉಳಿಸಿಕೊಳ್ಳಬಹುದು. ತೀವ್ರ ಒಣಗಿಕೆ, ಬಿರುಕು, ರಾಶ್‌ಗಳು ಅಥವಾ ಅಲರ್ಜಿಯಂತಹ ಸಮಸ್ಯೆಗಳು ಕಂಡುಬಂದಲ್ಲಿ ತಕ್ಷಣ ತಜ್ಞರ ಸಲಹೆ ಪಡೆಯುವುದನ್ನು ವೈದ್ಯರು ಸೂಚಿಸಿದ್ದಾರೆ.

# ಕೇಂದ್ರ ಸರ್ಕಾರ ಎತ್ತಿನಹೊಳೆ ಯೋಜನೆಯನ್ನು ಮಾಡಲು ಬಿಡುತ್ತಿಲ್ಲ: ಮುರುಳಿಧರ್ ಹಾಲಪ್ಪ

ವರದಿ : ಗುಬ್ಬಿ ಭರತ್



ಗುಬ್ಬಿ : 2014ರಲ್ಲಿ ಸಿಎಂ ಆಗಿದ್ದ ಸಿದ್ದರಾಮಯ್ಯನವರು ಸಕಲೇಶಪುರ ತಾಲೂಕಿನಲ್ಲಿ ಎತ್ತಿನಹೊಳೆ ಯೋಜನೆಗೆ ಶಂಕು ಸ್ಥಾಪನೆಯನ್ನು ಮಾಡಿದ್ದು ಆದರೆ ಕೇಂದ್ರ ಸರ್ಕಾರ ಎತ್ತಿನಹೊಳೆ ಯೋಜನೆಯನ್ನು ಮಾಡಲು ಬಿಡುತ್ತಿಲ್ಲ ಎಂದು ಕೆಪಿಸಿಸಿ ಉಪಾಧ್ಯಕ್ಷ ಮುರುಳಿಧರ್ ಹಾಲಪ್ಪ ತಿಳಿಸಿದರು.

ಗುಬ್ಬಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದವರು ಕರ್ನಾಟಕ ಸರ್ಕಾರ ಎತ್ತಿನಹೊಳೆ ಯೋಜನೆಗೆ 23 ಸಾವಿರ ಕೋಟಿ ನೀರಾವರಿ ಯೋಜನೆಗೆ ಅನ್ನದಾತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಯೋಜನೆಯನ್ನು ಸಿಎಂ ಸಿದ್ದರಾಮಯ್ಯನವರು ಅನುಷ್ಠಾನ ಮಾಡಿದರು.6657 ಕೆರೆಗಳಿಗೆ ತುಂಬಿಸುವಂತಹ ಎತ್ತಿನಹೊಳೆ ಯೋಜನೆ ಸುಮಾರು 8 ಜಿಲ್ಲೆಗಳಲ್ಲಿ ಯೋಜನೆ ಅನುಷ್ಠಾನ ಮಾಡುವ ಮುಖಾಂತರ ಸುಮಾರು 65 ಲಕ್ಷ ಜನರಿಗೆ ಜಾನುವಾರುಗಳಿಗೆ ಎತ್ತಿನಹೊಳೆ ಮುಖಾಂತರ ನೀರನ್ನು ಕೊಡುವುದರ ಮೂಲಕ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ರಾಜ್ಯ ಸರ್ಕಾರ ಅನುಷ್ಠಾನ ಮಾಡಿತ್ತು. ಆದರೆ ಕೇಂದ್ರ ಸರ್ಕಾರ ಎತ್ತಿನಹೊಳೆ ಯೋಜನೆಗೆ ಅಡ್ಡಗಾಲು ಹಾಕುತ್ತಿರುವುದು ಸರಿಯಲ್ಲ ಈ ಯೋಜನೆ ತುಮಕೂರು ಜಿಲ್ಲೆಗೆ ಅತಿ ಹೆಚ್ಚು ಅನುಕೂಲವಾಗುವ ಎಲ್ಲಾ ತಾಲೂಕುಗಳಿಗೆ ಕೂಡ ಎತ್ತಿನಹೊಳೆ ಯೋಜನೆ ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರ ಯೋಜನೆಯ ಅನುಷ್ಠಾನ ಮಾಡಲು ಬಿಡುತ್ತಿಲ್ಲ ಆದ್ದರಿಂದ ಜ.4ರಂದು ಕೆ.ಬಿ.ಕ್ರಾಸ್ ನಲ್ಲಿ ಎತ್ತಿನಹೊಳೆ ಯೋಜನೆ ಕುರಿತು ಪೂರ್ವಭಾವಿ ಸಭೆ ಕರೆದಿದ್ದು ಗುಬ್ಬಿ , ತಿಪಟೂರು , ತುರುವೇಕೆರೆ , ಚಿಕ್ಕನಾಯನಹಳ್ಳಿ ತಾಲ್ಲೂಕಿನ ರೈತರು ಭಾಗವಹಿಸುತ್ತಿದ್ದು ಈ ಸಭೆಯಲ್ಲಿ ಎತ್ತಿನಹೊಳೆ ಇಲಾಖೆಯ ಅಧಿಕಾರಿಗಳು ಭಾಗವಹಿಸಲಿದ್ದು ಎಲ್ಲ ರೈತರು ಭಾಗವಹಿಸಬೇಕೆಂದು ತಿಳಿದರು.

ಇದೇ ಸಂಧರ್ಭದಲ್ಲಿ ಗ್ಯಾರೆಂಟಿ ಸಮಿತಿ ಅಧ್ಯಕ್ಷ ಕೆ ಆರ್ ವೆಂಕಟೇಶ್, ಮುಖಂಡರಾದ ತಾತಯ್ಯ ಗುರು ರೇಣುಕಾರಾಧ್ಯ ಬಿದರೆ ಯತೀಶ್ ಗೋಪಿ ಜಗನ್ನಾಥ್ ಹಾಗೂ ಎಲ್ಲ ಮುಖಂಡರು ಕಾರ್ಯಕರ್ತರು ಭಾಗವಹಿಸಿದ್ದರು.

## ಡಿ.31ರಂದು ಜಿಲ್ಲಾ ಜಾಗೃತಿ ಉಸ್ತುವಾರಿ ಸಮಿತಿ ಸಭೆ

ತುಮಕೂರು: ಅನುಸೂಚಿತ ಜಾತಿ ಮತ್ತು ಬುಡಕಟ್ಟುಗಳ ದೌರ್ಜನ್ಯ ಪ್ರತಿಬಂಧ ನಿಯಮಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಯವರ ನ್ಯಾಯಿಕ ಸಭಾಂಗಣದಲ್ಲಿ ಡಿಸೆಂಬರ್ 31ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಜಾಗೃತಿ ಉಸ್ತುವಾರಿ ಸಮಿತಿಯ 4ನೇ ತ್ರೈಮಾಸಿಕ ಸಭೆಯನ್ನು ಏರ್ಪಡಿಸಲಾಗಿದೆ ಜಿಲ್ಲಾ ಜಾಗೃತಿ ಉಸ್ತುವಾರಿ ಸಮಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಕೃಷ್ಣಪ್ಪ ತಿಳಿಸಿದ್ದಾರೆ.

## ಪದವೀಧರರ ಕ್ಷೇತ್ರ ಚುನಾವಣೆ : ಅಂತಿಮ ಮತದಾರರ ಪಟ್ಟಿ ಪ್ರಕಟ

ತುಮಕೂರು: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದ ಚುನಾವಣೆ–2025ರ ದಿನಾಂಕ:1–11–2025ನ್ನು ಅರ್ಹತಾ ದಿನಾಂಕವೆಂದು ಪರಿಗಣಿಸಿ ಡಿಸೆಂಬರ್ 30ರಂದು ಅಂತಿಮ ಮತದಾರರ ಪಟ್ಟಿಯನ್ನು ತುಮಕೂರು ಮಹಾನಗರಪಾಲಿಕೆ ಸಾರ್ವಜನಿಕರ ಸೂಚನಾ ಫಲಕದಲ್ಲಿ ಪ್ರಚುರಪಡಿಸಲಾಗಿದೆ.

ತುಮಕೂರು ನಗರದ ಆಗ್ನೇಯ ಪದವೀಧರ ಕ್ಷೇತ್ರದ ಮತದಾರರು ಪ್ರಕಟಿತ ಮತದಾರರ ಪಟ್ಟಿಗಳಲ್ಲಿ ತಮ್ಮ ಹೆಸರು ನೋಂದಣಿಯಾಗಿರುವ ಮತ್ತು ಯಾವ ಮತಗಟ್ಟೆಗಳಲ್ಲಿ ನೋಂದಣಿಯಾಗಿದೆ ಎಂಬ ಬಗ್ಗೆ ಪರಿಶೀಲಿಸಲು ದೂ.ವಾ.ಸಂ. 0816–2272200, 9449872599ಕ್ಕೆ ಕರೆ ಮಾಡಿ ಅಥವಾ ವೆಬ್‌ಸೈಟ್ https://ceo.karnataka.gov.in ನಲ್ಲೂ ಮಾಹಿತಿ ಪಡೆಯಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಜ.2ರಂದು ಕನ್ನಡಪರ ಸಂಘಟನೆ/ಹೋರಾಟಗಾರರ ಸಭೆ

ತುಮಕೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಜನವರಿ 2ರಂದು ಬೆಳಿಗ್ಗೆ 10 ಗಂಟೆಗೆ ನಗರದ ಸರ್ಕಾರಿ ಅತಿಥಿ ಗೃಹ ಸಭಾಂಗಣ(ಪ್ರವಾಸಿ ಮಂದಿರ)ದಲ್ಲಿ ತುಮಕೂರು ಜಿಲ್ಲಾ ಕನ್ನಡ ಪರ ಸಂಘಟನೆ ಹಾಗೂ ಹೋರಾಟಗಾರರ ಸಭೆ ನಡೆಸಲಿದ್ದಾರೆ. ಜಿಲ್ಲೆಯ ಕನ್ನಡಪರ ಸಂಘಟನೆಗಳ ಮುಖ್ಯಸ್ಥರು ಹಾಗೂ ಕನ್ನಡಪರ ಹೋರಾಟಗಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಈಶ್ವರ್ ಕು. ಮಿರ್ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಪ್ರವಾಸ ಕಾರ್ಯಕ್ರಮ

ತುಮಕೂರು: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ: ಪುರುಷೋತ್ತಮ ಬಿಳಿಮಲೆ ಅವರು ಜನವರಿ 2ರಂದು ತುಮಕೂರು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಅಂದು ಬೆಳಿಗ್ಗೆ 10 ಗಂಟೆಗೆ ನಗರದ ಸರ್ಕಾರಿ ಅತಿಥಿ ಗೃಹ ಸಭಾಂಗಣ(ಪ್ರವಾಸಿ ಮಂದಿರ)ದಲ್ಲಿ ತುಮಕೂರು ಜಿಲ್ಲಾ ಕನ್ನಡ ಪರ ಸಂಘಟನೆ ಹಾಗೂ ಹೋರಾಟಗಾರರ ಸಭೆ ನಡೆಸಲಿದ್ದಾರೆ. ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ "ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ" ಸಭೆಯಲ್ಲಿ ಭಾಗವಹಿಸುವರು ಹಾಗೂ ಮಧ್ಯಾಹ್ನ 1 ಗಂಟೆಗೆ ಪತ್ರಿಕಾಗೋಷ್ಠಿ ನಡೆಸಲಿದ್ದಾರೆ.

ನಂತರ ಮಧ್ಯಾಹ್ನ 2.30 ಗಂಟೆಗೆ ತುಮಕೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ "ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನೆ" ಸಭೆಯಲ್ಲಿ ಭಾಗವಹಿಸುವರು. ತದನಂತರ ಸಂಜೆ 6 ಗಂಟೆಗೆ ಬೆಂಗಳೂರಿಗೆ ತೆರಳುವರು ಪ್ರಕಟಣೆ ತಿಳಿಸಿದೆ.

# ಸಾರಿಗೆ ಸಂಸ್ಥೆಯ ನೌಕರರ ಹೊರ ರಾಜ್ಯ ಅಧ್ಯಯನ ಪ್ರವಾಸಕ್ಕೆ ಚಾಲನೆ



ತುಮಕೂರು: ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಯ ನೌಕರರ ಹೊರ ರಾಜ್ಯ ಅಧ್ಯಯನ ಪ್ರವಾಸಕ್ಕೆ ಶಾಸಕ ಹಾಗೂ ಕೆ.ಎಸ್. ಆರ್.ಟಿ.ಸಿ ಅಧ್ಯಕ್ಷಎಸ್.ಆರ್.ಶ್ರೀನಿವಾಸ್ ಚಾಲನೆ ನೀಡಿದರು. ನಗರದ ದೇವರಾಜ ಅರಸು ಬಸ್ ನಿಲ್ದಾಣದಲ್ಲಿ ಕೆ.ಎಸ್. ಆರ್.ಟಿ.ಸಿ ತುಮಕೂರು ವಿಭಾಗದ 50 ಜನ ವಿವಿಧ ವೃಂದದ ನೌಕರರು ಮಹಾರಾಷ್ಟ್ರ, ಪಂಜಾಬ್ ಸೇರಿದಂತೆ 14 ರಾಜ್ಯಗಳ 15 ದಿನಗಳ ಆಧ್ಯಯನ ಪ್ರವಾಸಕೈಗೊಂಡಿದ್ದು, ತುಮಕೂರು ನಗರ ಶಾಸಕ ಜೋತಿ ಗಣೇಶ್,ಜಿ.ಪಂ. ಮಾಜಿ ಅಧ್ಯಕ್ಷ ವೈ.ಹೆಚ್. ಹುಚ್ಚಯ್ಯ, ಕೆ.ಎಸ್.ಆರ್.ಟಿ.ಸಿ.ವಿಭಾಗೀಯ ನಿಯಂತ್ರಣಾಧಿಕಾರಿ ಚಂದ್ರಶೇಖರ್.ಎಸ್. ಅವರುಗಳೊಂದಿಗೆ ಕೆ.ಎಸ್.ಆರ್.ಟಿ.ಸಿ. ಅಧ್ಯಕ್ಷಎಸ್.ಆರ್.ಶ್ರೀನಿವಾಸ್ ಹಸಿರು ನಿಶಾನೆ ತೋರಿಸಿದರು. ಈ ವೇಳೆ ಮಾತನಾಡಿದ ಕೆ.ಎಸ್.ಆರ್.ಟಿ.ಸಿ. ಅಧ್ಯಕ್ಷ ಎಸ್. ಆರ್.ಶ್ರೀನಿವಾಸ್, ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆಯ ತುಮಕೂರು ವಿಭಾಗದ ನೌಕರರು ಇಂದು ಅಧ್ಯಯನ ಪ್ರವಾಸಕ್ಕಾಗಿ ಪಂಜಾಬ್, ದೆಹಲಿ ಸೇರಿದಂತೆ 14 ರಾಜ್ಯಗಳಿಗೆ ಹೋಗುತ್ತಿದ್ದು, ಅಲ್ಲಿನ ಸಾರಿಗೆ ವ್ಯವಸ್ಥೆಯ ನಿರ್ವಹಣೆ,ಮೂಲಭೂತ ಸೌಕರ್ಯ,ರೂಟ್‌ಗಳ ನಿರ್ವಹಣೆ, ನೌಕರರಿಗೆ ದೊರೆಯುತ್ತಿರುವ ಸೌಲಭ್ಯ, ಪ್ರಯಾಣಿಕ ರರಕ್ಷಣೆ ಮತ್ತು ಕಾರ್ಯಾಚರಣೆಗೆ ವಿಧಿ,ವಿಧಾನಗಳನ್ನು ತಿಳಿಯಲು ಹಾಗು ಹತ್ತಿರದ ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಹೊರಟಿದ್ದಾರೆ. ಅವರಿಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ತುಮಕೂರು ವಿಭಾಗದಿಂದ ಮಾಡಿಕೊಡಲಾಗಿದೆ. ಸುಮಾರು 50 ಜನರು ಪ್ರಯಾಣಿಸುತ್ತಿದ್ದು, ತಾವುಗಳ ಪ್ರವಾಸದ ಸಂದರ್ಭದಲ್ಲಿ ನಡೆಸಿದ ಅಧ್ಯಯನದ ವರದಿಯನ್ನು ನೀಡಲಿದ್ದಾರೆ. ಇದೊಂದು ವಿವಿಧ ರಾಜ್ಯಗಳ ಸಾರಿಗೆ ನೌಕರರ ನಡುವಿನ ವಿಚಾರ ವಿನಿಮಯ ಕಾರ್ಯಕ್ರಮ ಇದಾಗಿದೆ ಎಂದರು. ಐವತ್ತುಜನ ನೌಕಕರು 15 ದಿನಗಳ ಕಾಲ ಕೈಗೊಳ್ಳುವ ಅಧ್ಯಯನ ಪ್ರವಾಸಕ್ಕೆ ನಮ್ಮ ಹಿರಿಯ ಅಧಿಕಾರಿಗಳು ವಾಹನವನ್ನು ವಿಶೇಷವಾಗಿ ವಿನ್ಯಾಸಗೊಳಿಸಿ,ಮಲಗಲು ಸಹ ಅವಕಾಶ ಕಲ್ಪಿಸಿದ್ದಾರೆ.ಪ್ರವಾಸಕ್ಕೆ ತೆರಳುವ ಎಲ್ಲಾ ನೌಕರರು ಒಳ್ಳೆಯ ರೀತಿಯಲ್ಲಿ ತೆರಳಿ,ಒಳ್ಳೆಯ ರೀತಿಯಲ್ಲಿ ನಡೆದುಕೊಂಡು,ವಿಭಾಗಕ್ಕೆಕೀರ್ತಿತರಲಿ ಎಂದು ಕೆ.ಎಸ್. ಆರ್.ಟಿ.ಸಿ ಅಧ್ಯಕ್ಷ ಎಸ್.ಆರ್.ಶ್ರೀನಿವಾಸ್ ಶುಭ ಹಾರೈಸಿದರು. ಜಿ.ಪಂ. ಮಾಜಿಅಧ್ಯಕ್ಷವೈ.ಹೆಚ್.ಹುಚ್ಚಯ್ಯ ಮಾತನಾಡಿ,ನಿಜಕ್ಕೂಇದೊಂದು ಸಂತೋಷದ ವಿಷಯ.ದಿನವೂ ನಟ್ಟು, ಬೋಟ್ಲು, ಸ್ಪಾನರ್,ಸ್ಟೈರಿಂಗ್ ಗಳಲ್ಲಿ ಮುಳುಗಿದ್ದ ಸಿಬ್ಬಂದಿಗೆ ಒಂದುರೀತಿಯಜ್ಞಾನಾರ್ಜನೆಗೆಕೆ.ಎಸ್. ಆರ್.ಟಿ.ಸಿ. ಅವಕಾಶ ಕಲ್ಪಿಸಿದೆ.ಹಿರಿಯ ಅಧಿಕಾರಿಗಳು ನೌಕರರಿಗೆ ಪ್ರವಾಸ ಕಲ್ಪಿಸಿ, ಒಳ್ಳೆಯದನ್ನು ಮಾಡಿದ್ದಾರೆ. ಪ್ರವಾಸ ಫಲಪ್ರಧವಾಗಲಿ ಎಂದು ಶುಭ ಹಾರೈಸಿದರು. ಕೆ.ಎಸ್.ಆರ.ಟಿ.ಸಿ.ತುಮಕೂರುವಿಭಾಗೀಯ ನಿಯಂತ್ರಣಾಧಿಕಾರಿಚಂದ್ರಶೇಖರ್. ಎಸ್ ಮಾತನಾಡಿ,ನಮ್ಮ ವಿಭಾಗದ ಸಿಬ್ಬಂದಿ ಇಲಾಖೆಯ ಮುಂದಿಟ್ಟ ಪ್ರಸ್ತಾವನೆಗೆಅಧ್ಯಕ್ಷರು ಸೇರಿದಂತೆಎಲ್ಲರೂಅನುಮೋಧನೆ ನೀಡಿದ ಪ್ರಯತ್ನಇಂದುಐವತ್ತುಜನರು ಪ್ರವಾಸಕೈಗೊಂಡಿದ್ದಾರೆ.ಪ್ರವಾಸದಲ್ಲಿ ನೌಕರರು ಬೇರೆ ಬೇರೆ ರಾಜ್ಯಗಳ ಪ್ರಾಕ್ಟಿಸ್ ಹೇಗಿದೆ. ನೌಕರರಿಗೆ ಮತ್ತು ಪ್ರಯಾಣಿಕರಿಗೆಇರುವ ಸೌಲಭ್ಯಗಳೇನು ?, ಎಂದುಅಧ್ಯಯನ ನಡೆಸಲಿದ್ದಾರೆ. ಅಲ್ಲದೆಉತ್ತಮವಾಗಿಕಂಡು ಬರುವ ಯೋಜನೆಗಳನ್ನು ಇಲ್ಲಿಗೆತರುವ,ನಮ್ಮಲ್ಲಿರುವಉತ್ತಮ ಅಂಶಗಳನ್ನು ಅಲ್ಲಿಯ ಸಾರಿಗೆ ಸಿಬ್ಬಂದಿ ಜೊತೆ ವಿನಿಮಯ ಮಾಡಿಕೊಳ್ಳುವ ಉದ್ದೇಶಇದಾಗಿದೆ. ಡಿಸೇಲ್‌ದರವನ್ನು ಪ್ರವಾಸದಲ್ಲಿರುವ ನೌಕರರೇ ಭರಿಸುತಿದ್ದಾರೆಎಂದರು. ಈ ವೇಳೆ ಕೆ.ಎಸ್.ಆರ್.ಟಿ.ಸಿ ವಿಭಾಗಿಯಕಾರ್ಯಾಗಾರತುಮಕೂರಿನ ಆಶೀಫ್‌ವುಲ್ಲಾ ಷರೀಫ್,ವಿಭಾಗೀಯ ಸಂಚಲನಾಧಿಕಾರಿ ಮಂಜುನಾಥ್.ಬಿನವೀನ್ ಪ್ರಧಾನ ಕಾರ್ಯದರ್ಶಿ ವನರಂಗಪ್ಪ ಮತ್ತಿತರರು ಉಪಸ್ಥಿತರಿದ್ದರು

## ಆನ್‌ಲೈನ್ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ತುಮಕೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಿಲ್ಲೆಯಲ್ಲಿ ಕ್ರಿಯಾತ್ಮಕ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ನಾಡಿನ ಭಾಷಾ ಸಂವರ್ಧನೆ, ಕಲೆ, ಸಾಹಿತ್ಯ, ಸಂಗೀತ, ಜಾನಪದ, ನೃತ್ಯ ಕಲಾ ಪ್ರಕಾರಗಳನ್ನು ಉಳಿಸಿ ಬೆಳೆಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿರುವ ನೋಂದಾಯಿತ ಸಂಘ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಲು ಹಾಗೂ ಅಸಂಘಟಿತ ಕಲಾವಿದರಿಗೆ ವಾದ್ಯ ಪರಿಕರ/ ವೇಷಭೂಷಣ ಖರೀದಿ ಹಾಗೂ ಚಿತ್ರಕಲೆ/ ಶಿಲ್ಪ ಕಲಾಕೃತಿಗಳ ಪ್ರದರ್ಶನಕ್ಕಾಗಿ ಧನ ಸಹಾಯ ನೀಡಲು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅವಧಿಯನ್ನು ಜನವರಿ 9ರವರೆಗೆ ವಿಸ್ತರಿಸಲಾಗಿದೆ. ಸಾಮಾನ್ಯ /ವಿಶೇಷ ಘಟಕ / ಪರಿಶಿಷ್ಟ ಪಂಗಡ ಉಪಯೋಜನೆಯಡಿ ಸೇವಾಸಿಂಧು ವೆಬ್‌ಸೈಟ್ www.Sevasindhu.karnataka.gov.in ಮೂಲಕ ಜನವರಿ 9ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0816–2275204ನ್ನು ಸಂಪರ್ಕಿಸಬಹುದಾಗಿದೆ. ನಿಗದಿತ ದಿನಾಂಕದ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅರ್ಜಿಯನ್ನು ನೇರವಾಗಿ ಇಲಾಖೆಯಲ್ಲಿ ಸ್ವೀಕರಿಸುವುದಿಲ್ಲ. ಧನ ಸಹಾಯಕ್ಕೆ ಅರ್ಜಿ ಸಲ್ಲಿಕೆಗೆ ಅನ್ವಯಿಸುವ ಮಾರ್ಗಸೂಚಿಗಳನ್ನು ಸೇವಾ ಸಿಂಧು ಪೋರ್ಟಲ್ ಮತ್ತು ಇಲಾಖೆಯ ವೆಬ್‌ಸೈಟ್ www.kannadasiri.karnataka.gov.in ನಲ್ಲಿ ಪಡೆಯಬಹುದಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕ ಈಶ್ವರ್ ಕು. ಮಿರ್ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 'ಮಕ್ಕಳು ಸಾಧನೆ ಜೊತೆ ಜವಾಬ್ದಾರಿಯನ್ನೂ ಮರೆಯಬಾರದು' : ಕುಂಚಿಟಿಗ ಸಂಘದ ಪ್ರತಿಭಾ ಪುರಸ್ಕಾರ



ತುಮಕೂರು: ಮಕ್ಕಳು ಪ್ರತಿಭಾ ಸಾಧನೆಯ ಜೊತೆಗೆ ಕೊನೆಗಾಲದಲ್ಲಿ ತಂದೆತಾಯಿಯ ಯೋಗಕ್ಷೇಮದ ಬಗ್ಗೆಯೂ ಕಾಳಜಿ ವಹಿಸಬೇಕು. ಉತ್ತಮ ಶಿಕ್ಷಣ ಪಡೆದು ವಿದೇಶಗಳಲ್ಲಿ ಉನ್ನತ ಸ್ಥಾನ ಪಡೆಯುವ ಮಕ್ಕಳು ನಂತರ ಹೆತ್ತವರನ್ನೇ ಮರೆಯುವ ಅಮಾನವೀಯ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಮಾಜಿ ಸಚಿವ, ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ.ಜಯಚಂದ್ರ ಹೇಳಿದರು.

ಕುಂಚಿಟಿಗ ಒಕ್ಕಲಿಗರ ವಿದ್ಯಾಭಿವೃದ್ಧಿ ಸಂಘ ಹಾಗು ವೂಡೇ ಪ್ರತಿಷ್ಠಾನದ ಆಶ್ರಯದಲ್ಲಿ ಮಂಗಳವಾರ ನಗರದ ಕುಂಚಿಟಿಗ ಸಮುದಾಯ ಭವನದಲ್ಲಿ ನಡೆದ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಿ ಮಾತನಾಡಿದ ಅವರು, ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಲು, ಅವರ ಭವಿಷ್ಯ ಉಜ್ವಲವಾಗಲು ತಂದೆತಾಯಿ ಎಷ್ಟೆಲ್ಲಾ ಶ್ರಮಪಡುತ್ತಾರೆ ಎಂಬುದು ಮಕ್ಕಳಿಗೂ ಗೊತ್ತು. ಹಾಗೇ ಮಕ್ಕಳು ಬದುಕು ರೂಪಿಸಿಕೊಂಡ ನಂತರ ಹೆತ್ತವರ ತ್ಯಾಗವನ್ನು ಮರೆಯಬಾರದು, ಅವರು ಕೊನೆಗಾಲದಲ್ಲಿ ನೆಮ್ಮದಿಯಾಗಿ ಬಾಳುವಂತೆ ನೋಡಿಕೊಳ್ಳುವುದು ನಿಮ್ಮದೇ ಜವಾಬ್ದಾರಿ ಎಂದರು.

ಸಮಾಜದ ಒಳಿತಿಗಾಗಿ ಅನೇಕರು ಸಹಾಯ ಮಾಡುತ್ತಾರೆ. ಈ ಭವನದಲ್ಲಿ ನಾವೆಲ್ಲಾ ಇದ್ದೇವೆಂದರೆ ಅದಕ್ಕೆ ದಿ.ರಂಗಣ್ಣನವರು ದಾನವಾಗಿ ನೀಡಿದ ಈ ಜಾಗ ಕಾರಣ ಅವರನ್ನು ಸ್ಮರಿಸಬೇಕು. ಹಾಗೇ ಪ್ರತಿ ವರ್ಷ ಪ್ರತಿಭಾ ಪುರಸ್ಕಾರ ಮಾಡುತ್ತಾ ಮಕ್ಕಳ ಶಿಕ್ಷಣಕ್ಕೆ ಎಲ್ಲಾರೀತಿಯಲ್ಲೂ ಸಹಾಯ, ಸಹಕಾರ ಮಾಡುತ್ತಾ ಬಂದಿರುವ ವೂಡೇ ಕುಟಂಬದವರ ಸೇವೆಯನ್ನು ಸದಾ ಸ್ಮರಿಸಬೇಕು. ತಾವು ಮುಂದೆ ಸಮಾಜಕ್ಕೆ ಕೊಡುಗೆ ನೀಡಲು ಇವರೆಲ್ಲಾ ಪ್ರೇರಣೆ ಆಗಬೇಕು ಎಂದು ಟಿ.ಬಿ.ಜಯಚಂದ್ರ ತಿಳಿಸಿದರು.

ಸಾಹಿತಿ ಪ್ರೊ. ಕೃಷ್ಣೇಗೌಡರು ಮಾತನಾಡಿ, ಈಗಿನ ಮಕ್ಕಳು ನೂರಕ್ಕೆ ನೂರು ಅಂಕ ಪಡೆಯುವಷ್ಟು ಬುದ್ಧಿವಂತರಾಗಿದ್ದಾರೆ. ಮುಂದೆ ಇಂತಹವರ ಪ್ರಮಾಣ ಹೆಚ್ಚಾಗಿ ಸ್ಪರ್ಧೆಯೂ ಹೆಚ್ಚುತ್ತದೆ. ಆಗ ಕೇವಲ ಬುದ್ಧಿವಂತಿಕೆಯು ಸವಾಲು ಎದುರಿಸಲು ಸಾಕಾಗುವುದಿಲ್ಲ. ಮೇಧಾವಿಗಳಾಗಬೇಕು. ಆಗ ಕಲಿಕೆಗಿಂಥಾ ಗ್ರಹಿಕೆ ಮುಖ್ಯವಾಗುತ್ತದೆ. ಮಕ್ಕಳು ಜಾಗತಿಕ ಮಟ್ಟದ ಸ್ಪರ್ಧೆಗಳಿಗೆ ಸಜ್ಜಾಗಬೇಕು ಎಂದರು.

ಸ್ವಾತಂತ್ರ್ಯ ದೊರೆತ ಸಂದರ್ಭದಲ್ಲಿ ದೇಶದಲ್ಲಿ ಅಕ್ಷರಸ್ಥರ ಸಂಖ್ಯೆ ಹೆಚ್ಚಾಗಬೇಕು ಎನ್ನುವುದಿತ್ತು. ನಂತರ ಅಕ್ಷರಸ್ಥರಾದರೆ ಸಾಲದು ಪದವಿಧರರಾಗಬೇಕು ಎನ್ನುವ ಹಂತಕ್ಕೆ ಹೋಯಿತು. ನಂತರ ಅದರಲ್ಲಿ ಅತ್ಯಧಿಕ ಅಂಕ ಪಡೆದು ಬುದ್ಧಿವಂತಿಕೆ ಸಾಬೀತು ಮಾಡಬೇಕಾಗಿತ್ತು. ಇನ್ನು ಮುಂದೆ ಜಗತ್ತಿನ ಸವಾಲುಗಳನ್ನು ಎದುರಿಸುವ ಮೇಧಾವಿತನ ಬೆಳೆಸಿಕೊಳ್ಳಬೇಕಾಗುತ್ತದೆ. ಇದು ಶಿಕ್ಷಣದ ಬದಲಾವಣೆಯ ಕ್ರಾಂತಿ ಎಂದು ಹೇಳಿದರು.

ನಮ್ಮಲ್ಲಿ ನಿರುದ್ಯೋಗ ಸಮಸ್ಯೆ ಇದೆ ಎನ್ನುವುದು ಸುಳ್ಳು. ಕೆಲಸ ಮಾಡುವವರಿಗೆ ಕೆಲಸ ಇದ್ದೇಇದೆ. ಕೆಲಸವಿಲ್ಲ ಎನ್ನುವುದು ಮೈಗಳ್ಳರು ಹೇಳುವ ಮಾತು. ಯಾರೇ ಆಗಲಿ ಬುದ್ಧಿ ಬಳಿಸಿ ಇಲ್ಲವೆ ದೇಹ ದಂಡಿಸಿ ಕೆಲಸ ಮಾಡಬೇಕು, ಎರಡೂ ಬಳಸದವರು ಬದುಕಿದ್ದೂ ಆತ್ಮಹತ್ಯೆ ಮಾಡಿಕೊಂಡಂತೆ. ದೇಶದಲ್ಲಿ ಈಗ ಅಭಿವೃದ್ಧಿಯ ರೋಗ ಅಂಟಿಕೊಂಡಿದೆ. ಅಭಿವೃದ್ಧಿ ಎಂದರೆ ರಸ್ತೆ ಅಗಲ, ದೊಡ್ಡ ಕಟ್ಟಡಗಳ ನಿರ್ಮಾಣ ಅಲ್ಲ, ಅಭಿವೃದ್ಧಿ ಎಂದರೆ ಸೌಕರ್ಯಗಳ ಜೊತೆಗೆ ಸಮಾಜಲ್ಲಿ ಪ್ರಬುದ್ಧರಾಗಬೇಕು. ನಮ್ಮ ಜನರಿಗೆ ದುಡಿಯುವುದನ್ನು ಮುಖ್ಯವಾಗಿ ಕಲಿಸಿಕೊಡಬೇಕು. ಕೆಲಸ ಮಾಡುವವನ ಕಾವಲಿಗೆ ಒಬ್ಬ, ಅವನ ಕಾವಲಿಗೆ ಅವನ ಮೇಲೊಬ್ಬ ಅಧಿಕಾರಿ ನೇಮಕ ಮಾಡುವುದು ದುರಾದೃಷ್ಟವೇ ಸರಿ ಎಂದು ಪ್ರೊ. ಕೃಷ್ಣೇಗೌಡ ಹೇಳಿದರು.

ಶಾಸಕ ಜಿ.ಬಿ.ಜ್ಯೋತಿಗಣೇಶ್ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಡಾಕ್ಟರ್, ಎಂಜಿನಿಯರಿಂಗ್‌ನಂತಹ ಕೋರ್ಸ್‌ಗಳ ಬಗ್ಗೆಯೇ ಯೋಚಿಸದೆ ಬೇರೆ ಕ್ಷೇತ್ರಗಳಲ್ಲಿಯೂ ವಿಫಲವಾದ ಅವಕಾಶಗಳಿವೆ. ಅಂತಹ ಕೋರ್ಸ್‌ಗಳ ಬಗ್ಗೆ ಸಾಧಕರು ಮಾರ್ಗದರ್ಶನ ಮಾಡಬೇಕು ಎಂದು ತಿಳಿಸಿದರು.

ಕೆಪಿಸಿಸಿ ಉಪಾಧ್ಯಕ್ಷ ಮುರಳಿಧರ ಹಾಲಪ್ಪ ಮಾತನಾಡಿ, ಪ್ರತಿಭಾವಂತಾ ಮಕ್ಕಳಿಗೆ ಪುರಸ್ಕಾರ ನೀಡುವುದು ಒಳ್ಳೆಯ ಸಂಪ್ರದಾಯ. ಇದರಿಂದ ಬೇರೆ ಮಕ್ಕಳೂ ಸಾಧನೆ ಮಾಡಲು ಉತ್ತೇಜಿಸಿದಂತಾಗುತ್ತದೆ. ಇಂತಹ ಕಾರ್ಯಕ್ರಮಗಳಿಗೆ ಕೆಎಎಸ್, ಐಎಎಸ್, ಐಪಿಎಸ್ ಸಾಧಕರನ್ನು ಆಹ್ವಾನಿಸಿ ಅವರ ಸಾಧನೆಯ ಅನುಭವ ಹಂಚಿಕೊಂಡರೆ ಮಕ್ಕಳಿಗೆ ಪ್ರೇರಣೆ ದೊರೆಯುತ್ತದೆ ಎಂದು ಸಲಹೆ ಮಾಡಿದರು.

ಮಹಿಳಾ ಠಾಣೆಯ ವೃತ್ತ ನಿರೀಕ್ಷಕಿ ವಿಜಯಲಕ್ಷ್ಮಿ ಮಾತನಾಡಿ, ಸಾಮಾಜಿಕ ಜಾಲತಾಣಗಳ ವಂಚನೆಗಳ ಬಗ್ಗೆ ವಿದ್ಯಾರ್ಥಿಗಳು ಜಾಗೃತರಾಗಿರಬೇಕು. ಅಂತರ್ಜಾಲವನ್ನು ತಮ್ಮ ಬೆಳವಣಿಗೆಗೆ ಪೂರಕವಾಗಿ ಬಳಸಿಕೊಳ್ಳಬೇಕು, ಅದು ಮಾರಕವಾಗಬಾರದು. ವಿಶೇಷವಾಗಿ ಹೆಣ್ಣುಮಕ್ಕಳು ಜಾಲತಾಣದಲ್ಲಿ ಅಪರಿಚಿತರೊಂದಿಗೆ ಸ್ನೇಹ ಗಳಿಸಬಾರದು, ವೈಯಕ್ತಿಕ ಮಾಹಿತಿ ಹಂಚಿಕೊಳ್ಳಬಾರದು ಎಂದು ಹೇಳಿದರು.

## ಇಂದು ಸಿರಿಧಾನ್ಯ/ಪಾಕಸ್ಪರ್ಧೆ

ತುಮಕೂರು0: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ವತಿಯಿಂದ ಡಿಸೆಂಬರ್ 31ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕೋತಿತೋಪು ಆರ್.ಟಿ. ನಗರದ ರವೀಂದ್ರ ಕಲಾನಿಕೇತನದಲ್ಲಿ "ಜಿಲ್ಲಾ ಮಟ್ಟದ ಸಿರಿಧಾನ್ಯ ಹಾಗೂ ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆ" ಯನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಸಿರಿಧಾನ್ಯಗಳಿಂದ ತಯಾರಿಸಿದ ತಿನಿಸುಗಳನ್ನು ಪ್ರದರ್ಶಿಸುವುದು, ತಿನಿಸುಗಳನ್ನು ಮನೆಯಲ್ಲಿಯೇ ತಯಾರಿಸಿ ತರುವುದು, ಸಿರಿಧಾನ್ಯ ಸಿಹಿ ಮತ್ತು ಖಾರದ ತಿನಿಸುಗಳು, ಮರೆತು ಹೋದ ಖಾದ್ಯ ತಿನಿಸುಗಳನ್ನು ಪ್ರದರ್ಶಿಸಬಹುದಾಗಿದ್ದು, ಆಸಕ್ತ ನಾಗರೀಕರು ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 8277932926, 8277932808 ಅಥವಾ ಹತ್ತಿರದ ಕೃಷಿ ಇಲಾಖೆಯನ್ನು ಸಂಪರ್ಕಿಸಬಹುದಾಗಿದೆ.

ಸಿರಿಧಾನ್ಯ ನಡಿಗೆ 2025–26 :

ಸಿರಿಧಾನ್ಯ ಉತ್ಪನ್ನಗಳ ಕುರಿತು ಗ್ರಾಹಕರಿಗೆ ಜಾಗೃತಿ ಮೂಡಿಸಲು ಸಿರಿಧಾನ್ಯ ಜಾಥಾ ಕಾರ್ಯಕ್ರಮವನ್ನು ಡಿಸೆಂಬರ್ 31ರಂದು ಬೆಳಿಗ್ಗೆ 6.30 ಗಂಟೆಗೆ ನಗರದ ಟೌನ್‌ಹಾಲ್ ವೃತ್ತಿದಿಂದ ಚರ್ಚ್ ಸರ್ಕಲ್ ಮರ್ಗವಾಗಿ ಶ್ರೀ ಶಿವಕುಮಾರಸ್ವಾಮೀಜಿ ಸರ್ಕಲ್ ಕಡೆಯಿಂದ ಜೂನಿಯರ್ ಕಾಲೇಜು ಮೈದಾನದವರೆಗೆ "ನಮ್ಮ ನಡಿಗೆ ಸಿರಿಧಾನ್ಯದ ಕಡೆಗೆ" ವಾಕಥಾನ್ ಏರ್ಪಡಿಸಲಾಗಿದ್ದು, ಸದರಿ ಕಾರ್ಯಕ್ರಮದಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರೈತರಿಗೆ ಹಾಗೂ ಗ್ರಾಹಕರಿಗೆ ಉತ್ತೇಜನ ನೀಡುವ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಜಂಟಿ ಕೃಷಿ ನಿರ್ದೇಶಕರು ಮನವಿ ಮಾಡಿದ್ದಾರೆ.

# ದಲಿತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಭೀಮ್ ಆರ್ಮಿ ಸಂಘಟನೆಯಿಂದ ಬೃಹತ್ ಪ್ರತಿಭಟನೆ



ತುಮಕೂರು : ತುಮಕೂರು ನಗರದ ಬಿ.ಜಿ.ಎಸ್. ವೃತ್ತ ಮಹಾನಗರ ಪಾಲಿಕೆ ಆವರಣದಲ್ಲಿರುವ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಪುತ್ಥಳಿಯಿಂದ ಜಿಲ್ಲಾಧಿಕಾರಿಗಳ ಕಛೇರಿಯವರೆಗೆ ಭೀಮ್ ಆರ್ಮಿ ಸಂಘಟನೆಯ ವತಿಯಿಂದ ವಿವಿಧ ಬೇಡಿಕೆಗಳು ಹಾಗೂ ದಲಿತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ಜಾಥಾ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂಭಾಗದಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಭೀಮ್ ಆರ್ಮಿ ಸಂಘಟನೆಯ ಜಿಲ್ಲಾಧ್ಯಕ್ಷರಾದ ಅಯ್ಯನಪಾಳ್ಯ ಶ್ರೀನಿವಾಸ್ ರವರು ಮಾತನಾಡಿ ತುಮಕೂರು ಜಿಲ್ಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರರು ಹಾಗೂ ಆರೆ ಸರ್ಕಾರಿ, ಹೊರ ಗುತ್ತಿಗೆ ಮತ್ತು ಖಾಸಗಿ ವಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ಎಲ್ಲಾ ಕಾರ್ಮಿಕ ಹಾಗೂ ಅಧಿಕಾರಿ ವರ್ಗದ ಹಾಗೂ ಸಿಬ್ಬಂದಿಗಳ ಮೇಲೆ ಜಾತಿ ಆಧಾರಿತ ದೌರ್ಜನ್ಯಗಳ ನಡೆಯುತ್ತಿದ್ದು ಈ ಕುರಿತು ಅತೀ ಶೀಘ್ರವಾಗಿ ಎಚ್ಚೆತ್ತುಕೊಳ್ಳಬೇಕಿದೆ ಎಂದರು.

ಮುಂದುವರೆದು ಕರ್ನಾಟಕ ಪಬ್ಲಿಕ್ ಎಂಪ್ರೆಸ್ ಶಾಲೆ, ತುಮಕೂರು ಇಲ್ಲಿ ಉಪಪ್ರಾಂಶುಪಾಲರಾಗಿ ಕಾರ್ಯನಿರ್ವಹಣೆ ಮಾಡುತ್ತಿರುವ ಶ್ರೀಮತಿ ಮಂಜುಳ ಎನ್. ಇವರನ್ನು ಸೇವೆಯಿಂದ ಅಮಾನತು ಮಾಡಬೇಕಾಗಿದೆ ಏಕೆಂದರೆ ಈಕೆ ಇದೆ ಶಾಲೆಯಲ್ಲಿ ಡಿ.ಗ್ರೂಪ್ ನೌಕರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪರಿಶಿಷ್ಠ ಜಾತಿಯ ಕಾವ್ಯ ಎನ್ ರವರ ಮೇಲೆ ದಿನಾಂಕ : 29–07–2025ರಂದು ಜಾತಿ ನಿಂದನೆ ಮಾಡಿ ಮಾನಸಿಕ ಕಿರುಕುಳ ನೀಡಿದ್ದು ಪ್ರಕರಣವೂ ಸಹ ದಾಖಲಾಗಿರುತ್ತದೆ. ಆದರೆ ಕ್ರಮ ವಾಗದೇ ಇರುವುದು ಶೋಚನೀಯ ಸಂಗತಿಯಾಗಿದೆ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಪ್ರಧಾನಮಂತ್ರಿ ಶಕ್ತಿ ನಿರ್ಮಾಣ ಯೋಜನೆ ಪೂರಕ ಪೌಷ್ಟಿಕ ಆಹಾರ ನೀಡಲು ವಿಫಲರಾಗಿರುತ್ತಾರೆ, ಎಸ್.ಡಿ.ಎಂ.ಸಿ ಹಾಗೂ ಮುಖ್ಯ ಪ್ರಾಂಶುಪಾಲರ ಅನುಮೋದನೆ ಪಡೆಯದೆ ಸರ್ವಾಧಿಕಾಯಂತೆ ಕರ್ತವ್ಯ ಲೋಪ ಎಸಗಿರುತ್ತರೆ, ಮೇಲ್ಕಂಡ ಎಲ್ಲಾ ಅಂಶಗಳು ಮಾನ್ಯ ಕ್ಷೇತ್ರ ಶಿಕ್ಷಾಣಾಧಿಕಾರಿಗಳು, ತುಮಕೂರು ಸಹಾಯಕ ನಿರ್ದೇಶಕರು ಅಕ್ಷರ ದಾಸೋಹ, ತಾಲ್ಲೂಕು ಪಂಚಾಯಿತಿ, ತುಮಕೂರು, ಇವರ ತಂಡ ಶಾಲೆಗೆ ಬೇಟಿ ನೀಡಿ ಪರಿಶೀಲನೆ ಮಾಡಿ ವರದಿಯಿಂದ ಸಬೀತಾಗಿರುತ್ತದೆ, ಆದ್ದರಿಂದ ಸರ್ಕಾರಿ ಕರ್ತವ್ಯ ಲೋಪ ಎಸಗಿ ಅನುದಾನ ದುರ್ಬಳಕೆ ಮಾಡಿಕೊಂಡಿರುವ ಇವರ ಮೇಲೆ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ಇಂದು ಪ್ರತಿಭಟನೆ ಮಾಡುದುವರ ಮುಖೇನ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದ್ದೇವೆ ಎಂದು ತಿಳಿಸಿದರು.

ಕಾರ್ಯಧ್ಯಕ್ಷರಾದ ಕೀರ್ತಿ ಮಾತನಾಡಿ ತುಮಕೂರು ನಗರ ಎಂ.ಜಿ. ರಸ್ತೆಯಲ್ಲಿರುವ ಡಾ|| ಬಿ.ಆರ್. ಅಂಬೇಡ್ಕರ್ ಭವನವು ಜಿಲ್ಲಾ ಕೇಂದ್ರ ಸ್ಥಾನದಲ್ಲಿದ್ದು ಸರಿಯಾದ ನಿರ್ವಹಣೆ ಇಲ್ಲದೆ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಂಪೂರ್ಣ ದುರಸ್ಥಿತಿಗೆ ತಲುಪಿದೆ, ಜಿಲ್ಲಾಡಳಿತವು ಕಳೆದ 12 ವರ್ಷಗಳಿಂದ ಸೂಕ್ತ ಕ್ರಮ ತೆಗೆದುಕೊಳ್ಳದೇ, ಬೇಜಾವಬ್ದಾರಿ ತನ ತೋರುತ್ತಿರುವ ಹಿನ್ನಲೆಯಲ್ಲಿ ಜಿಲ್ಲಾಡಳಿತವು ಈ ಕೂಡಲೇ ಸಾರ್ವಜನಿಕ ಹಾಗೂ ಸಂಘಟನೆಗಳ ಸಭೆ ಹಾಗೂ ಸಮಾರಂಭ ನಡೆಸಲು ಅಂಬೇಡ್ಕರ್ ಭವನದ ಸಭಾಂಗಣವನ್ನು ಸರಿ ಪಡಿಸಲು ಅಥವಾ ಅಂಬೇಡ್ಕರ್ ಭವನವನ್ನು ಮರು ನಿರ್ಮಾಣ ಮಾಡಲು ಒತ್ತಾಯಿಸುತ್ತಿದ್ದೇವೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಭೀಮ್ ಆರ್ಮಿ ಜಿಲ್ಲಾಧ್ಯಕ್ಷರಾದ ಅಯ್ಯನಪಾಳ್ಯ ಶ್ರೀನಿವಾಸ್, ಕಾರ್ಯಧ್ಯಕ್ಷರಾದ ಕೀರ್ತಿ, ಮುಖಂಡರುಗಳಾದ ನಟರಾಜ್ ಮೌರ್ಯ, ಸುರೇಶ್, ಹೆತ್ತೇನಹಳ್ಳಿ ಮಂಜುನಾಥ್, ಚೇತನ್, ಕಾಂತರಾಜು, ಕಿರಣ್ ಕುಮಾರ್, ಶಿವಾಜಿ, ರಂಗನಾಥ್, ಕುಮಾರ್, ಕೆ.ಸುಮಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಛಲವಾದಿ ಪತ್ತಿನ ಸೌಹಾರ್ದಕ್ಕೆ ಅಧ್ಯಕ್ಷರಾಗಿ ಸಿ.ಭಾನುಪ್ರಕಾಶ್ ಆಯ್ಕೆ

ತುಮಕೂರು: ತುಮಕೂರು ಛಲವಾದಿ ಪತ್ತಿನ ಸೌಹಾರ್ದ ಸಹಕಾರಿ ಸಂಘದ ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಳಿ ನೂತನ ಅಧ್ಯಕ್ಷರಾಗಿ ಸಿ.ಭಾನುಪ್ರಕಾಶ್ ಉಪಾಧ್ಯಕ್ಷರಾಗಿ ಚೆಲುವರಾಜು.ಜಿ.ಎನ್ ಹಾಗೂ ಎಲ್ಲಾ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಗರದ ಬನಶಂಕರಿ ಅರಣ್ಯ ಇಲಾಖೆ ಮುಂಭಾಗ ಇರುವ ತುಮಕೂರು ಛಲವಾದಿ ಪತ್ತಿನ ಸೌಹಾರ್ದ ಸಹಕಾರಿ ಸಂಘಕ್ಕೆ ಮಂಗಳವಾರ ನಡೆದ ಚುನಾವಣೆಯಲ್ಲಿ ಒಟ್ಟು 13 ಸ್ಥಾನ ಹೊಂದಿರುವ ಸಹಕಾರಿ ಸಂಘಕ್ಕೆ ಎಲ್ಲಾ ಸ್ಥಾನಗಳಿಗೂ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದು, ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಕ್ಕೆ ನಡೆದ ಚುನವಣೆಯಲ್ಲಿ ಪ್ರತಿ ಸ್ಥಾನಕ್ಕೆ ಒಂದೊಂದು ನಾಮಪತ್ರ ಮಾತ್ರ ಸಲ್ಲಿಕೆಯಾದ ಕಾರಣ ಅಧ್ಯಕ್ಷರಾಗಿ ಸಿ.ಭಾನುಪ್ರಕಾಶ್ ಉಪಾಧ್ಯಕ್ಷರಾಗಿ ಚೆಲುವರಾಜು.ಜಿ.ಎನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿಯಾದ ಸಹಕಾರ ಇಲಾಖೆಯ ಸಹಾಯಕ ಲೆಕ್ಕ ಪರಿಶೋಧನಾ ಅಧಿಕಾರಿ ಬಸವರಾಜು ತಿಳಿಸಿದ್ದಾರೆ.

ಇನ್ನು ಹಾಲಿ ನಿರ್ದೇಶಕರಾದ ಹೆಚ್.ಎಸ್.ಪರಮೇಶ್, ಗಿರಿಜೇಶ್.ಜಿ.ಆರ್, ಹೆಚ್.ಎಸ್.ಸಂಪತ್ ಕುಮಾರ್, ಸುರೇಶ್.ಜಿ.ಆರ್, ಬೈರೇಶ್.ಡಿ.ಎನ್, ಪುನಾರಾಯ್ಕೆಯಾಗಿದ್ದು, ನೂತನವಾಗಿ ಗಂಗಾಂಜನಯ್ಯ, ಜಿ.ಪುಟ್ಟಯ್ಯ, ಚಂದ್ರಶೇಖರ್. ಎನ್, ರಾಜಣ್ಣ.ಕೆ, ರತ್ನಮ್ಮ.ಹೆಚ್.ಟಿ, ಶೈಲಜ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ಈ ವೇಳೆ ಸಂಘದ ಮುಖ್ಯಕಾರ್ಯನಿರ್ವಣಾಧಿಕಾರಿ ಜಯಂತಿ, ಚೇತನ್.ಬಿ.ಸಿ ಇತರರು ಇದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.